ಶ್ರೀ ಎಂ.ಎಸ್ ಪಾಟೀಲ್:— ಈ ಹಿಂದೆಯೂ ಸದರಿ ವಿಧೇಯಕದ ಬಗ್ಗೆ ಚರ್ಚೆಯಾಗಿತ್ತು. ಕೊನೇ ಗಳಿಗೆಯಲ್ಲಿ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸಭೆ ಸೇರಿದಾಗ ಇದನ್ನು ಮುಂದೆ ಹಾಕಬೇಕಾದಂಥ ಪ್ರಸಂಗ ಬಂದಿದ್ದರಿಂದ ಇದನ್ನು ಮತ್ತೆ ಈ ಸದನದ ಮುಂದೆ ತರುವ ಸಂದರ್ಭವೊದಗಿದೆ.

ಶ್ರೀ ಎಸ್. ಸುರೇಶ್ ಕುಮಾರ್:— ಇನ್ನು 24 ಗಂಟೆಗಳಲ್ಲಿ ಯಾವುದೇ ಹೈಟೆಕ್ ಆಸ್ಪತ್ರೆಗಳಾಗಲಿ, ಶಿಕ್ಷಣ ಸಂಸ್ಥೆಗಳಾಗಲಿ ಬರುವುದಿಲ್ಲ, ಅಲ್ಲವೇ? ದಯವಿಟ್ಟು ಇದರ ಮೇಲೆ ನಾಳೆ ಚರ್ಚೆಗೆ ತೆಗೆದುಕೊಳ್ಳೋಣ

ಶ್ರೀ ಎಂ.ಸಿ ನಾಣಯ್ಯ:— ಆಯಿತು, ನಾಳೆಯೇ ಚರ್ಚೆಗೆ ತೆಗೆದುಕೊಳ್ಳೋಣ.

5. ಶಾಸನಾತ್ಮಕ ನಿರ್ಣಯ

ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು):— ಮಾನ್ಯ ಛೇರ್ಮನ್‌ರವರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಈ ಸಭೆಯ ಮುಂದೆ ಮಂಡಿಸುತ್ತೇನೆ.

"ಈ ಸದನವು ಭಾರತ ಸಂವಿಧಾನದ 252(2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ 1999ನ್ನು (1999ರ ಕೇಂದ್ರ ಅಧಿನಿಯಮ 15) ಅಂಗೀಕರಿಸುವುದು"

ಛೇರ್ಮನ್:— ಪ್ರಸ್ತಾವ ಏನೆಂದರೆ,

"ಈ ಸದನವು ಭಾರತ ಸಂವಿಧಾನದ 252(2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ 1999ನ್ನು (1999ರ ಕೇಂದ್ರ ಅಧಿನಿಯಮ 15) ಅಂಗೀಕರಿಸುವುದು"

ಪ್ರಸ್ತಾವ ಮಂಡಿಸಲಾಯಿತು.

4.20 ಪಿ.ಎಂ.

ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು):— ಮಾನ್ಯ ಛೇರ್ಮನ್‌ರವರೆ. ನಗರ ಭೂಮಿತಿ ಕಾಯ್ದೆಯನ್ನು 1976ರಲ್ಲಿ ಜಾರಿಗೆ ತಂದನಂತರ ಇಲ್ಲಿಯವರೆವಿಗೂ ಸಹ ಯಾವುದೇ ಕಾರ್ಯಕ್ರಮವಾಗಿಲ್ಲ. ಕರ್ನಾಟಕ ಐದು ಪಟ್ಟಮ ಪ್ರದೇಶ (ಬೆಂಗಳೂರು, ಮಂಗಳೂರು, ಮೈಸೂರು, ಬೆಳಗಾಂ ಮತ್ತು ಹುಬ್ಬಳ್ಳಿ-ಧಾರವಾಡ)ಗಳಿಗೆ ಸಂಬಂಧಿಸಿದಂತೆ ಮಾತ್ರ ಇದು ಸೀಮಿತವಾಗಿದ್ದು, ಇಷ್ಟು ದಿವಸಗಳವರೆಗೆ ಯಾವುದೇ

ಒಂದು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕ್ರಾಯಕ್ರಮವಾಗಿಲ್ಲ. ಇದರಿಂದ ಜನರಿಗೆ ಅನುಕೂಲವಾಗುವುದರ ಜೊತೆಗೆ ಅನಾನುಕೂಲವಾಗಿರುವ ಸಂದರ್ಭದಲ್ಲಿ ಈ ನಿಟ್ಟಿನಲ್ಲಿ, ಕೇಂದ್ರ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆಯೋ ಅದನ್ನು ನಾವು ಅಂಗೀಕರಿಸುವುದರಿಂದ ಸನ್ಮಾನ್ಯ ಸದಸ್ಯರುಗಳೆಲ್ಲರೂ ಇದಕ್ಕೆ ತಮ್ಮ ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) :— ಮಾನ್ಯ ಛೇರ್ಮನ್‌ರವರೆ, ಇದರ ಬಗ್ಗೆ ಚರ್ಚೆ ಮಾಡುವುದೇನೂ ಇಲ್ಲ. ಏಕೆಂದರೆ, ಭಾರತ ಸಂವಿಧಾನದ 252(2) ರ ಪ್ರಕಾರ ಅದನ್ನು ಮಾಡಬೇಕು. ಆದರೆ, ನಿಮಗೆ ಇಲ್ಲಿ ಎರಡು ಆಯ್ಕೆಗಳಿವೆ. If you want you can retain. -- ರಾಜ್ಯ ಸರ್ಕಾರದವರಾದ ನಿಮ್ಮ ತೀರ್ಮಾನವನ್ನು ಕೂಡ ಹೇಳಬೇಕಲ್ಲ. ಕೇಂದ್ರ ಸರ್ಕಾರದವರು ಮಾಡಿರುವುದನ್ನು ನೀವು ಒಪ್ಪುತ್ತೀರಾ? ಇಲ್ಲವೆಂದರೆ, ರಾಜ್ಯದಲ್ಲಿ ಅರ್ಬನ್ ಸೀಲಿಂಗ್ ಆಕ್ಟ್ ಇರಬೇಕು. ಅರ್ಬನ್ ಏರಿಯದಲ್ಲಿ, ಇವೊತ್ತಿನ ದಿವಸ 10, ಎಕರೆ, 8, ಎಕರೆ, 5 ಎಕರೆ ಮತ್ತು 4 ಎಕರೆಗಳಲ್ಲಿ ಫ್ಲಾಟ್ ಇಟ್ಟುಕೊಂಡಿರುವವರು ಕೂಡ ಇರುವುದರಿಂದ, ಅವರನ್ನು ಸಾರಾಸಗಟಾಗಿ ತೆಗೆಯಲು ನೀವು ಒಪ್ಪಿಕೊಂಡುಬಿಟ್ಟರೆ ಸಹಜವಾಗಿ ನೀವು ಅವರನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇಲ್ಲವೇ 'ಇದು ನಮ್ಮ ಸರ್ಕಾರದ ಧೋರಣೆಯಾಗಿದ್ದು, ಅರ್ಬನ್ ಸೀಲಿಂಗ್ ಆಕ್ಟ್‌ನ್ನು ನಾವು ತೆಗೆದುಹಾಕಿ ಕೇಂದ್ರ ಸರ್ಕಾರ ಭಾರತ ಸಂವಿಧಾನದ 252(2)ರ ಪ್ರಕಾರ ಏನು ಮಾಡಿದ್ದಾರೆ, ಅದನ್ನು ನಾವು ಒಪ್ಪುತ್ತೇವೆ' ಎಂಬ ತೀರ್ಮಾನ ನಿಮ್ಮದಾಗಿದ್ದರೆ ಅದು ನಿಮಗೆ ಬಿಟ್ಟಿದ್ದು. ಆದರೆ, ಇದರಿಂದ ಅನಾಹುತ ಏನಾಗುತ್ತದೆಂದರೆ ಈ ರೀತಿಯಾಗಿ ಒಂದೊಂದಾಗಿ ಇಂತಹ ಪ್ರಗತಿಪರವಾದ ಕಾನೂನುಗಳನ್ನು ಬಿಡುತ್ತಾ ಹೋದರೆ ನಾಳೆ ತೊಂದರೆಗೀಡಾಗಬೇಕಾಗುತ್ತದೆ. ಹೇಗೆ ನೀವು ಭೂ ಸುಧಾರಣಾ ಕಾನೂನನ್ನು ತಿರುಚಿ ಇಂಡಸ್ಟ್ರಿಯಲಿಸ್ಟ್‌ಗೆ ಭೂಮಿ ಕೊಡುವುದಕ್ಕೋಸ್ಕರ ಮಾಡಿದಿರೋ, ಅವರುಗಳು ಇಂಡಸ್ಟ್ರಿ ಹೆಸರಿನಲ್ಲಿ ಫಾರ್ಮ್ ಹೌಸ್‌ಗಳನ್ನು ಕಟ್ಟಿಕೊಂಡಿದ್ದು, ಈ ತರಹದ ಉದ್ದೇಶಗಳಿಗಾಗಿಯೇ ನೂರಾರು ಎಕರೆಗಳನ್ನು ಖರೀದಿಸುತ್ತಿದ್ದಾರೆ. ನೀವು ನೋಡಿರಬಹುದು, ಇಂಡಸ್ಟ್ರಿ ಹೆಸರಿನಲ್ಲಿ ಎಲ್ಲಾ ಕಡೆಗಳಲ್ಲಿ 200, 300 ಎಕರೆಗಳಷ್ಟು ಜಮೀನನ್ನು ತೆಗೆದುಕೊಳ್ಳುತ್ತಿದ್ದು, ಇಂಡಸ್ಟ್ರಿ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವುದು ಕೇವಲ 10-20 ಎಕರೆಗಳಷ್ಟು ಮಾತ್ರ. ಉಳಿದ ಜಮೀನಿನಲ್ಲಿ ಗಾರ್ಡನ್, ಸ್ವಿಮ್ಮಿಂಗ್‌ಪೂಲ್ ಮಾಡಿಕೊಂಡು ದೊಡ್ಡ ದೊಡ್ಡ ಕಾಂಪೌಂಡ್ ಕಟ್ಟಿಕೊಂಡಿದ್ದಾರೆ. ಇದು ಒಂದೆಡೆಯಾದರೆ, ಮತ್ತೊಂದು ಕಡೆಯಲ್ಲಿ ಅರ್ಬನ್ ಸೀಲಿಂಗ್‌ನಲ್ಲೂ ಕೂಡ ನಾವು ಕಾನೂನನ್ನು ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡದಿದ್ದ ಕಾರಣ, ಇದಕ್ಕೆ ಯಾವುದೇ ಸರ್ಕಾರವಿರಬಹುದು, ದುರ್ದೈವವೇಂದರೆ, ಹಳ್ಳಿಗಳಲ್ಲಿ ನಾವು ಅನೇಕ ಸಾರಿ ಟ್ರಿಬ್ಯೂನಲ್‌ಗಳನ್ನು ರಚಿಸಲು ಒತ್ತಾಯಿಸಿ ಅಲ್ಲಿ ಮಾಡಿದ್ದೇವೆ. ಆದರೆ, ಇಲ್ಲಿ ಅರ್ಬನ್ ಸೀಲಿಂಗ್‌ಗೆ ಮಾತ್ರ ನಾವು ಗಮನ ಕೊಡುತ್ತಿಲ್ಲ, ಅತ್ತ ಕಡೆ ನಮ್ಮ ಲಕ್ಷವೂ ಇಲ್ಲ. ಬೆಂಗಳೂರು ನಗರದಲ್ಲಿ 30 x 40 ನಿವೇಶನಕ್ಕೆ 4

ಲಕ್ಷದಿಂದ 20 ಲಕ್ಷ ರೂಪಾಯಿಗಳವರೆವಿಗೂ ದರವಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ನೂರಾರು ಎಕರೆಗಳನ್ನು ಖರೀದಿಸಿದವನಿಗೆ ಇಪ್ಪತ್ತು ಲಕ್ಷ ರೂಪಾಯಿಗಳು ಸಹ ಸಿಕ್ಕುವುದಿಲ್ಲ. ಆದರೆ, ಆತನಿಗೆ ನಾವು ಸೀಲಿಂಗ್ ಹಾಕಿದ್ದೇವೆ, ನಗರ ಪ್ರದೇಶದಲ್ಲಿ ಸೀಲಿಂಗ್ ಅನ್ನು ತೆಗೆಯುತ್ತೇವೆ. ಸರ್ಕಾರದಲ್ಲಿ ಇಂತಹ ದ್ವಂದ್ವ ನೀತಿ ಇರುವುದರಿಂದ ಪ್ರಗತಿಪರವಾದ, ಸಾಮಾಜಿಕ ನ್ಯಾಯ ಕೊಡತಕ್ಕತಂಥ ಸರ್ಕಾರ ಕೇಂದ್ರ ಸರ್ಕಾರದ ತೀರ್ಮಾನಕ್ಕೆ ಒಪ್ಪಿಕೊಳ್ಳುತ್ತದೆಯೇ? ಏನೋ ಇದು ನನಗೆ ಗೊತ್ತಿಲ್ಲ. ದಯಮಾಡಿ ಆದರ ಬಗ್ಗೆ ಹೇಳಬೇಕು.

ಶ್ರೀ ಎಂ.ಎಸ್. ಪಾಟೀಲ್ :— ನಮ್ಮ ಸರ್ಕಾರದಲ್ಲಿ ದ್ವಂದ್ವ ನೀತಿ ಎನ್ನುವುದು ಯಾವುದು ಇಲ್ಲ. 1976ರಿಂದ ಇಲ್ಲಿಯವರೆಗೆ ಕಾನೂನಿನಡಿ ಇಂಪ್ಲಿಮೆಂಟ್ ಆಗಿಲ್ಲದಿರುವುದಕ್ಕೆ ಯಾವ ಸರ್ಕಾರ ಕಾರಣವೆಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರುವುದರಿಂದ ಇದರ ಬಗ್ಗೆ ನಾನು ಚರ್ಚಿಸುವುದಿಲ್ಲ. ಇಲ್ಲಿ ವಾಸ್ತವಾಂಶವನ್ನು ಪರಿಗಣಿಸುವುದು ಬಹಳ ಮುಖ್ಯವಾದುದು. ನಗರ ಪ್ರದೇಶದಲ್ಲಿ 30 x 40 ಅಳತೆಯ ನಿವೇಶನದ ದರ ಇಪ್ಪತ್ತು ಲಕ್ಷ ರೂಪಾಯಿಗಳವರೆಗೂ ಇದೆಯೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಈ ಕಾನೂನು ಇರುವುದರಿಂದಲೇ ಹಾಗಾಗಿದೆ. ಒಂದು ವೇಳೆ ಆ ಕಾನೂನು ಇರದಿದ್ದರೆ ದರ ಅಷ್ಟು ಹೆಚ್ಚಾಗುವುದಿಲ್ಲ. ಆದುದರಿಂದ, ಇದನ್ನು ತೆಗೆಯುವುದರಿಂದ ಜಮೀನಿನ ದರ ಕಡಿಮೆಯಾಗುತ್ತದೆನ್ನುವ ಸಂಪೂರ್ಣ ವಿಶ್ವಾಸ ನನಗಿದೆ. ಇದರ ಜೊತೆಗೆ ಇಲ್ಲಿ ಯಾರಿಗೂ ಕೂಡ ಅನುಕೂಲ ಮಾಡಿಕೊಡತಕ್ಕಂಥ ಸಂದರ್ಭವೂ ಇಲ್ಲ. ಈಗಾಗಲೇ ಎರಡು ಸಲ ಇದರ ಬಗ್ಗೆ ಈ ಸದನ ಹಾಗೂ ಮೇಲ್ಮನೆಯಲ್ಲಿ ಚರ್ಚೆಯಾಗಿದೆ. ಚರ್ಚೆಯಾಗಿ ರೆಕಮೆಂಡ್ ಮಾಡಿರುವ ವಿಷಯ ಇದಾಗಿದೆ. ಅಲ್ಲದೆ, ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡಿರುವ ಹಿನ್ನಲೆ ಸಹ ಇದ್ದಕ್ಕಿರುವುದರಿಂದ, ಒಂದು ವೇಳೆ ಕರ್ನಾಟಕಕ್ಕೆ ಸೀಮಿತವಾಗಿ ಆ್ಯಕ್ಟ್ ಬೇಕಿತ್ತೆಂದರೆ ಇದರ ಬಗ್ಗೆ ಪರ್ಯಾಲೋಚಿಸೋಣ. ಆದುದರಿಂದ, ತಂದಿರುವ ಈ ನಿರ್ಣಯಕ್ಕೆ ತಾವು ಒಪ್ಪಿಗೆ ಕೊಡಬೇಕೆದಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :— ಮಾನ್ಯ ಛೇರ್ಮನ್‌ರವರೆ, ಇಲ್ಲಿ ಮೂಲಭೂತವಾಗಿ ಒಂದು ಪ್ರಶ್ನೆ ಆಡಕವಾಗಿದೆ. ಕೇಂದ್ರ ಸರ್ಕಾರ ಈ ಕುರಿತ ಮಸೂದೆಯನ್ನು ಅಲ್ಲಿ ಪಾಸ್ ಮಾಡಿ ಕಳುಹಿಸಿರುವಂತಹ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ಈ ಕಾನೂನು ಜಾರಿಯಲ್ಲಿದೆ. ಸದರಿ ವಿಧೇಯಕವನ್ನು ಮಂಡಿಸುವಂಥ ಸಂದರ್ಭದಲ್ಲಿ ಅದನ್ನು ರಿಪೀಲ್ ಮಾಡಬೇಕೆಂದು ಕೇಳುವಾಗ 1976ರಲ್ಲಿ ಬಂದಂಥ ಈ ಕಾನೂನಿನಡಿಯಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಎಕರೆ ಜಮೀನು ಲಭ್ಯವಾಯಿತು ಎನ್ನುವದರ ಬಗ್ಗೆ ಮಾಹಿತಿ ಕೊಟ್ಟಿದ್ದರೆ ವಿಧೇಯಕದಿಂದ ಏನೂ ಲಾಭವಾಗಿಲ್ಲವೆನ್ನುವ ಮಾತನ್ನು ಒಪ್ಪಿಕೊಳ್ಳಬಹುದಾಗಿತ್ತು, ಆ ವಿವರಣೆ ಬಹಳ ಪ್ರಾಮುಖ್ಯ. ಹಿಂದೆ ಯಾವ ಸರ್ಕಾರವಿತ್ತೋ,

ಯಾರು ಇದ್ದರೋ ಎಂಬುದಕ್ಕಿಂತ ಹೆಚ್ಚಾಗಿ ಈ ಕಾನೂನಿನ ಅಡಿಯಲ್ಲಿ ಎಷ್ಟು ಜಮೀನನ್ನು ಸಂಗ್ರಹಿಸಲು ಸಾಧ್ಯವಾಯಿತು, ಎಷ್ಟರ ಮಟ್ಟಿಗೆ ಪ್ರಯೋಜನವಾಯಿತು ಎಂಬ ಬಗ್ಗೆ ಸಹ ಒಂದು ಮಾತನ್ನು ಹೇಳಿಲ್ಲ. ಈ ರಾಜ್ಯದಲ್ಲಿ ಎರಡು ನೀತಿಯಾಯಿತು. ಈ ಮಸೂದೆ ಅನ್ವಯವಾಗುವುದು ಬೆಂಗಳೂರು, ಮೈಸೂರು, ಮಂಗಳೂರು ಅಂತಹ ನಗರ ಪ್ರದೇಶಗಳಲ್ಲಿ ಮಾತ್ರ. ಒಂದು ಕಡೆ ಲ್ಯಾಂಡ್ ಸೀಲಿಂಗ್‌ನ್ನು ಹಳ್ಳಿಗಳ ಮಟ್ಟದಲ್ಲಿ ಇಟ್ಟುಕೊಂಡಿದ್ದೇವೆ. ಆದರೆ ನಗರ ಪ್ರದೇಶದಲ್ಲಿ ಇಟ್ಟುಕೊಂಡಿರುವ ಸೀಲಿಂಗ್‌ನ್ನು ತೆಗೆದು ಹಾಕುತ್ತೇವೆ ಎಂದರೆ ಅದರ ಪರಿಣಾಮ ಏನಾಗುತ್ತದೆ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿ 30 x 40ಸೈಟನ್ನು ತೆಗೆದುಕೊಳ್ಳಬೇಕಾದರೆ ಹತ್ತು, ಇಪ್ಪತ್ತು ಲಕ್ಷವಾದರೂ ಸಿಗುವುದಿಲ್ಲ. ತಾವು ಈಗ ಇರತಕ್ಕ ಕಾನೂನನ್ನು ಸಂಪೂರ್ಣವಾಗಿ ತೆಗೆದುಹಾಕುವುದರಿಂದ, ಅದೂ ಬೆಂಗಳೂರಿನಂತಹ ಪಟ್ಟಣ ಪ್ರದೇಶಗಳು ಕರ್ನಾಟಕದಲ್ಲಿ ಇರುವುದರಿಂದ, ನಿಮಗೆ ಕಾನ್‌ಸೆಂಟ್ರೇಷನ್ ಆಫ್ ವೆಲ್ತ್ ಆಗುವುದಿಲ್ಲವೆ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಬ್ಲಾಕ್‌ಮನಿ ಅಕಾಮೊಡೇಟ್ ಮಾಡಲು ಬೆಂಗಳೂರಿನಲ್ಲಿ ಇದು ಒಂದು ಸಾಧನೆಯಾಗುವುದಿಲ್ಲವೆ? ಇದನ್ನು ಜಾರಿಗೆ ತರುವುದರಿಂದ ಬೆಲೆ ಕಡಿಮೆಯಾಗುತ್ತದೆ ಎಂದು ತಾವು ಅರ್ಥೈಸುವುದಾದರೆ ಬ್ಲಾಕ್‌ಮನಿ ತಂದು ಭೂಮಿಯ ಬೆಲೆಯನ್ನು ಇನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ತಾವು ಮರೆಯಬಾರದು. ಇವತ್ತು under the directive principles concentration of wealth ಗೆ ಅವಕಾಶವನ್ನು ಮಾಡಬಾರದು ಎಂದು ಇದೆ. ಆ ರೀತಿ ಸರ್ಕಾರಗಳು ತೀರ್ಮಾನ ತೆಗೆದುಕೊಳ್ಳಬಾರದು ಎಂದು ಇದೆ. ಇವೆಲ್ಲ ಇದ್ದರೂ ಇಂಥ ಕಾನೂನು ತರುವುದು ಸರಿಯೆ? ಹಾಲಿ ಇರತಕ್ಕ ಕಾನೂನಿನಿಂದ ಲಾಭವಾಗದಿದ್ದರೂ ಕೂಡ ಒಂದು ರೀತಿಯಾದ ಭಯ ಇರುತ್ತಿತ್ತು. ಯಾರಾದರೂ ಪಟ್ಟಣ ಪ್ರದೇಶದಲ್ಲಿ ಜಮೀನು ಕೊಂಡುಕೊಳ್ಳುವುದಿದ್ದರೆ ನನ್ನ ಸೀಲಿಂಗ್ ಲಿಮಿಟ್‌ಗಿಂತ ಜಾಸ್ತಿ ಇದೆ ಎಂಬ ಭಯ ಇರುತ್ತಿತ್ತು. ಈಗ ಆ ಸೀಲಿಂಗ್ ಲಿಮಿಟ್‌ನ್ನು ತೆಗೆದುಬಿಟ್ಟರೆ, ಯಾರು ಎಷ್ಟು ಬೇಕಾದರೂ ಅಕ್ವೈರ್ ಮಾಡುವುದಾದರೆ ಬ್ಲಾಕ್ ಮನಿಯನ್ನು ಅಕಾಮಾಡೇಟ್ ಮಾಡಲು ಸಾಕಷ್ಟು ದಾರಿಯನ್ನು ಮಾಡಿಕೊಟ್ಟಂತೆ ಆಗುತ್ತದೆ. ದಯಮಾಡಿ concentration of wealth-accumalation of black money ಅನ್ನು ಈ ಮಸೂದೆಯನ್ನು ತೆಗೆಯುವ ಮೂಲಕ ಯಾವ ರೀತಿಯಲ್ಲಿ ಕಂಟ್ರೋಲ್ ಮಾಡುತ್ತೀರಾ? ಈ ಬಗ್ಗೆ ಇನ್ನೊಂದು ಮಸೂದೆಯನ್ನು ತರಬಹುದು, ಇದರ ಬಗ್ಗೆ ಸಚಿವ ಸಂಪುಟದಲ್ಲಿ ಯೋಚನೆ ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಇರತಕ್ಕ ಕಾನೂನನ್ನು ರೀಪ್ಲೇಸ್ ಮಾಡತಕ್ಕ ಹೊಸ ಮಸೂದೆಯನ್ನು ತಾವು ಇಲ್ಲಿ ತನ್ನಿ. ಆ ರೀತಿ ಮಾಡುವ ಮೂಲಕ ಕಾನ್‌ಸೆಂಟ್ರೇಷನ್ ಆಫ್ ವೆಲ್ತ್ ಆಗದ ಹಾಗೆ ಮಾಡುತ್ತೇವೆ ಎಂದು ಹೇಳಿ ಆನಂತರ ರೀಪ್ಲೇಸ್ ಮಾಡುತ್ತೇವೆ ಎಂದು ಹೇಳಿದರೆ ಪರವಾಗಿಲ್ಲ. ಕೇಂದ್ರ ಸರ್ಕಾರ ಇದನ್ನು ತಂದಿದೆ ಎಂಬ ಒಂದೇ ಕಾರಣಕ್ಕಾಗಿ ಹಾಲಿ ಇರುವುದನ್ನು ತೆಗೆದುಹಾಕಿ ಎಂದು ಹೇಳುವ ನೀತಿ ಸರಿಯಲ್ಲ. ಹಳ್ಳಿಗೇ ಒಂದು ನೀತಿ,

ಪಟ್ಟಣಕ್ಕೇ ಒಂದು ನೀತಿ ಎಂದು ಮಾಡುವುದಾದರೆ ಅದು ಸರಿಯೆ? ದಯಮಾಡಿ ತಮ್ಮ ನೀತಿ ಏನು ಎಂಬ ಬಗ್ಗೆ ಸ್ಪಷ್ಟಪಡಿಸಬೇಕು. ಕಾನ್‌ಸೆಂಟ್ರೇಷನ್ ಆಫ್ ವೆಲ್ತ್ ಆಗುವುದರ ಬಗ್ಗೆ ಯಾವ ರೀತಿಯಾಗಿ ಕಂಟ್ರೋಲ್ ಮಾಡಲು ಸಾಧ್ಯ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಇದರ ಬಗ್ಗೆ ಮರುಪರಿಶೀಲನೆ ಮಾಡುವ ಅವಶ್ಯಕತೆ ಇದೆಯೆಂದು ನನ್ನ ಭಾವನೆ. ತಮ್ಮಿಂದ ಹೇಳಿಕೆ ಬಂದಮೇಲೆ ನಮ್ಮ ಸ್ಪಷ್ಟ ಅಭಿಪ್ರಾಯವನ್ನು ಹೇಳಲು ಸಾಧ್ಯವಾಗುತ್ತದೆ.

ಶ್ರೀಮತಿ ಪ್ರಮೀಳ ನೇಸರ್ಗಿ :— ಮಾನ್ಯ ಅಧ್ಯಕ್ಷರೆ, ಅರ್ಬನ್ ಸೀಲಿಂಗ್ ಆಕ್ಟ್ ಮತ್ತು ಪವರ್ಸ್ ಏನಿತ್ತು ಅದನ್ನು ಈಗಾಗಲೇ ಈ ಸದನ ಡಿಲಿಗೇಟ್ ಮಾಡಿದೆ. ಅಂದರೆ ಪಾರ್ಲಿಮೆಂಟ್‌ಗೆ ಎಲ್ಲಾ ಅಧಿಕಾರವನ್ನು ಕೊಟ್ಟು ನಮ್ಮಲ್ಲಿ ಯಾವುದೇ ಅಧಿಕಾರವನ್ನು ಇಟ್ಟುಕೊಂಡಿಲ್ಲ. ಆ ರೀತಿ ತಾವು ಅಧಿಕಾರವನ್ನು ಇಟ್ಟುಕೊಳ್ಳದಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ, ಪಾರ್ಲಿಮೆಂಟ್ ಏನು ಬೇಕಾದರೂ ಮಾಡಿ ಎಂದು ಅರ್ಬನ್ ಸೀಲಿಂಗ್ ಆಕ್ಟ್‌ನ ಬಗ್ಗೆ ಅವರಿಗೆ ಅಧಿಕಾರವನ್ನು ಕೊಟ್ಟಮೇಲೆ ತಾವು ಆ ರೀತಿ ರೆಜಲ್ಯೂಷನ್ ಕೊಟ್ಟಿದ್ದೀರಿ, ಅವರು ಇದನ್ನು ಮಾಡಿದ್ದಾರೆ. ತಾವು ಅದರ ಬಗ್ಗೆ ಇಲ್ಲಿ ರೆಜಲ್ಯೂಷನ್ ತಂದಿದ್ದೀರಿ. ಒಂದು ವೇಳೆ ನೀವು ಏನಾದರೂ ಒಂದು ಕಾನೂನು ಮಾಡುತ್ತೇವೆ ಎಂದು ಹೇಳುವುದಾದರೆ, ತಾವು ಅಧಿಕಾರವನ್ನೇ ಇಟ್ಟುಕೊಂಡಿಲ್ಲ, ನೀವು ಅದನ್ನು ಮಾಡಲು ಹೇಗೆ ಅಧಿಕಾರ ಬರುತ್ತದೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಇವತ್ತು ರೆಜಲ್ಯೂಷನ್ ನಲ್ಲಿ ಏನೇ ಮಾಡಿದ್ದರೂ ಸಹ ಕೇಂದ್ರ ಸರ್ಕಾರದ ಆಯಕ್ಟ್‌ಇವತ್ತು ರಿಪೀಲ್ ಆಗಿದೆ. ಆ ರೀತಿ ರಿಪೀಲ್ ಆದ ತಕ್ಷಣ ತಾವು ಒ೦ಮಾಡಿರುವ ಅಧಿಕಾರದಿಂದ ಇದು ಎಲ್ಲಾ ಕಡೆ ಜಾರಿಗೆ ಬರುತ್ತಿದೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡತಕ್ಕ ಅಗತ್ಯ ಇಲ್ಲ, ಮಾಡುವುದಕ್ಕೆ ಬರುವುದೂ ಇಲ್ಲ. ಇದುವರೆಗೆ ಅಕ್ವೈರ್ ಆಗಿ ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ ಪೊಜಿಷನ್‌ಗೆ ತೆಗೆದುಕೊಂಡಿದ್ದೀರಲ್ಲ ಆ ಭೂಮಿಯ ಗತಿ ಏನಾಗುತ್ತದೆ? ಅದನ್ನು ಆ ಜನಗಳಿಗೆ ಏನಾದರು ವಾಪಸ್ ಕೊಡುತ್ತೀರಾ? ಒಂದು, ಎರಡು, ಈ ಮೂರು ಸಾವಿರ ಎಕರೆ ಜಮೀನು, ಎಂ.ಎಸ್. ರಾಮಯ್ಯನವರ ಸಾವಿರಾರು ಎಕರೆ ಜಮೀನುಗಳು ಇಡೀ ಕರ್ನಾಟಕದಲ್ಲಿ ಇದೆ. ಅದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಇಂಥವರಿಗೆ ಸಹಾಯ ಮಾಡುವುದಕ್ಕೆ ತಾವು, ಈ ಕಾನೂನಿನ ಮೂಲಕ ಅಂತರಿಕವಾಗಿ ಸಹಾಯ ಮಾಡಿದ್ದೀರಿ ಎಂದು ಹೇಳದೆ ಗತ್ಯಂತರವಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಛೇರ್ಮನ್‌ರವರೆ, ಯಾವಾಗ ನಮಗೆ ಇದ್ದಂಥ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರ ಮಾಡಿಬಿಟ್ಟಿರೋ ಆವಾಗಲೆ ಇದರ ಕಥೆ ಮುಗಿದುಹೋಯಿತು. ಅವರ ಜಮೀನು ಕಿತ್ತುಕೊಳ್ಳುವುದು,

ಇವರ ಜಮೀನು ಇಟ್ಟುಕೊಳ್ಳುವ ಪ್ರಶ್ನೆಯೇ ಉಳಿದಿಲ್ಲ. ಯಾವಾಗ ಅಧಿಕಾರವನ್ನು ಪಾರ್ಲಿಮೆಂಟ್‌ಗೆ ಡೆಲಿಗೇಟ್ ಮಾಡಿದಮೇಲೆ ಆ ಭೂಮಿಯನ್ನು ಕಿತ್ತುಕೊಳ್ಳುವ ಅಥವಾ ಇಟ್ಟುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಅವರು ಇದರ ಬಗ್ಗೆ ಹೇಳಿದರೂ ಪ್ರಯೋಜನ ಇಲ್ಲ, ಹೇಳಿದಿದ್ದರೂ ಪ್ರಯೋಜನ ಇಲ್ಲ. ಇದು ಮುಗಿದುಹೋದ ಕತೆ. ಆದ್ದರಿಂದ ನಮ್ಮಲ್ಲಿ ಇದರ ಬಗ್ಗೆ ಚರ್ಚೆ ಮಾಡತಕ್ಕ ಪ್ರಶ್ನೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈ ಬಗ್ಗೆ ಚರ್ಚೆ ಮಾಡಲು ಅವಕಾಶವೇ ಇಲ್ಲವೆಂದರೆ ಈ ರೆಜಲ್ಯೂಷನ್ನನ್ನು ಅಡ್ಮಾಪ್ಟ್ ಮಾಡಬೇಡಿ. ನಮಗೆ ಚರ್ಚೆ ಮಾಡಲು ಅವಕಾಶವೇ ಇಲ್ಲವೆಂದಮೇಲೆ why are you bringing this resolution? ಇದು ಇನ್ನು ನಿಮ್ಮ ಕೈಯಲ್ಲಿದೆ ಎಂಬ ದೃಷ್ಟಿಯಿಂದ ಇದು ಬಂದಿದ್ದು. ಈ ಸಂದರ್ಭದಲ್ಲಿ ನಾನು ಆರ್ಟಿಕಲ್ 252ನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದನ್ನು ಮಾಡುವುದು ಬಿಡುವುದು ಬೇರೆ ವಿಚಾರ. ಆದರೆ ಇದರಲ್ಲಿ ಲೀಗಲ್ ವಿಚಾರ ಏನಿದೆ ಎಂದರೆ, ಮಾನ್ಯ ಜಯಚಂದ್ರರವರು, ಶ್ರೀಮತಿ ಪ್ರಮೀಳ ನೇಸರ್ಗಿಯವರು ಹೇಳಿದಂತೆ, 1976 ರಿಂದಲೂ ಕೆಲವು ಜಮೀನನ್ನು ತಾವು ಸ್ವಾಧೀನ ಮಾಡಿಕೊಂಡಿದ್ದೀರಿ, ಅದನ್ನು ತಾವು ವಾಪಸ್ ಕೊಡುತ್ತೀರೋ ಅದಕ್ಕೆ ಏನಾದರೂ ಪರಿಹಾರ ಕೊಡುತ್ತೀರೋ? ಅದಕ್ಕೆ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಟ್ಟು ಪರಿಹಾರ ಕೊಡುತ್ತೀರೋ ಎಂಬ ಪ್ರಶ್ನೆ ಬರುತ್ತದೆ. ಆ ರೀತಿ ಮಾಡಿದರೆ ಕೊಟ್ಯಾಂತರ ರೂಪಾಯಿಗಳ ಪರಿಹಾರವನ್ನು ತಾವು ಕೊಡಬೇಕಾಗುತ್ತದೆ. ಆದ್ದರಿಂದ ಆರ್ಟಿಕಲ್ 252ರಲ್ಲಿ ಏನಿದೆ ಎಂದರೆ ``power of Parliament to legislate for two or more States by consent and adoption of such legislation by any other State if it appears to the Legislature of two or more States to be desirable that any of the matters with respect to which Parliament has no power to make laws for the States except as provided in Article 249 and 250 should be regulated in such States by Parliament by law." The question of regulation by us does not arise." And if resolutions to that effect are passed by all Houses of the Legislatures of those States it shall be lawful for the Parliament to pass an Act for regulating that matter accordingly and any Act so passed shall apply to such States and to any other States by which it is adopted otherwise by Resolution passed in that behalf by the House or where there two Houses, by each of the Houses of Legislature." ಅಂದರೆ ಈ ರೆಜಲ್ಯೂಷನ್ನನ್ನು ಪಾಸ್ ಮಾಡಿ ನಮ್ಮಲ್ಲೂ ಅಪ್ಲಿಕೆಬಲ್ ಮಾಡಿ ಎಂದು ಈಗ ಕೊಡುತ್ತಿದ್ದೇವೆ. we are authorising now. ನಾವು ಆ ಆಕ್ಟ್‌ಗೆ ಸಮ್ಮತಿ ಕೊಟ್ಟಂತೆ ಆಗುತ್ತದೆ ಅರ್ಬನ್ ಸೀಲಿಂಗ್ ಆಕ್ಟ್‌ನ್ನು ನಾವು ತರುವುದಿಲ್ಲ ಎಂಬ ದೃಷ್ಟಿಯಿಂದ. ಆದರೆ ಈ ರೆಜಲ್ಯೂಷನ್ನನ್ನು

ತಾವು ಕಳಿಸಲೇಬೇಕಾಗುತ್ತದೆ. ತಾವು ಅದನ್ನು ಕಳಿಸದಿದ್ದರೆ then you tell me, what is the position? ಇದನ್ನು ಕಳಿಸದಿದ್ದರೂ ಆಗುತ್ತದೆಂದರೆ ಇದನ್ನು ಏಕೆ ಕಳಿಸುತ್ತೀರಿ? ಎರಡನೆ ಕ್ಲಾಜ್‌ನಲ್ಲಿ ಏನು ಹೇಳುತ್ತಾರೆಂದರೆ "Any Act so passed by the Parliament may be amended or repealed by an Act of Parliament passed or adopted in like manner but shall not as respects any State to which it applies, be amended or repealed by an Act of the Legislature of the State." ನಮಗೆ ಆರ್ಟಿಕಲ್ 252ನ ಪ್ರಕಾರ ಅಧಿಕಾರ ಇದೆಯೆಂದು ತಿಳಿದುಕೊಂಡೇ ನಮ್ಮ ರೆಜಲ್ಯೂಷನ್‌ನ್ನು ಈ ಆರ್ಟಿಕಲ್ 252 ಸಬ್-ಕ್ಲಾಸ್ 2 ರಲ್ಲಿ ಮಾಡಿ ಕಳಿಸುತ್ತಿದ್ದೇವೆ. ಒಂದು ವೇಳೆ ತಾವು ಒಪ್ಪದಿದ್ದರೆ exception ಎಂದು ಇಡುತ್ತಾರೆ. ಯಾಕೆಂದರೆ ಯಾವುದೇ ರಾಜ್ಯಕ್ಕೆ in the interest of the States to make special provision ಸಂವಿಧಾನದಲ್ಲಿ ಪ್ರಾವಿಜನ್ ಇದೆ. ಸಣ್ಣಪುಟ್ಟದ್ದು ಯಾವುದೇ ಇರಬಹುದು you can enact special laws, ಆದ್ದರಿಂದ ಇಲ್ಲಿ ಬೇಸಿಕ್ ಪ್ರಶ್ನೆ ನಾವು ಎತ್ತಿರುವುದು ಏನೆಂದರೆ, 1976 ರಿಂದ ಇಲ್ಲಿಯವರೆಗೆ ಸಣ್ಣ ಫ್ಲಾಟ್ ಇರಬಹುದು, ದೊಡ್ಡದ್ದು ಇರಬಹುದು ಅದನ್ನು ಮೊಟಕುಗೊಳಿಸಿದ್ದಾಗಲಿ, ಮುಟ್ಟುಗೋಲು ಹಾಕಿಕೊಂಡಿದ್ದಾಗಲಿ, ಸ್ವಾಧೀನ ಪಡಿಸಿಕೊಂಡಿದ್ದಾಗಲಿ, ಅಥವಾ ಅರ್ಬನ್ ಸೀಲಿಂಗ್ ಆಕ್ಟ್‌ನ ಕೆಳಗೆ ವಶಪಡಿಸಿಕೊಂಡಂಥ ಜಮೀನನ್ನು ವಾಪಸ್ ಅವರಿಗೆ ಕೊಡುತ್ತೀರೋ ಅವರಿಗೆ ಏನಾದರೂ ಪರಿಹಾರ ಕೊಡುತ್ತೀರೋ ಅಥವಾ ತೆಗೆದುಕೊಂಡವು ಹಾಗೆ ಇರಲಿ, ಇನ್ನು ಮುಂದೆ ಯಾರು ಫಾರಂ ಹೌಸ್ ಮಾಡುತ್ತಾರೆ ಅವರಿಗೆ ಮಾತ್ರ ಸಹಾಯ ಮಾಡಲು ನಾವು ಇದನ್ನು ಒಪ್ಪಿಕೊಂಡಿದ್ದೇವೆ ಎಂದು ಹೇಳುತ್ತೀರೋ ಎಂಬುದು ಮೂಲಭೂತವಾದ ಪ್ರಶ್ನೆ.

ಶ್ರೀ ಎಂ.ಎಸ್. ಪಾಟೀಲ್ :— ಮಾನ್ಯ ಛೇರ್ಮನ್‌ರವರೆ, ಕಾನೂನುಗಳು ಯಾವುವೂ ರಿಟ್ರಾಸ್‌ಪೆಕ್ಟೀವ್ ಆಗಿ ಜಾರಿಗೆ ಬರತಕ್ಕದ್ದು ಇಲ್ಲ. ಈ ಕಾನೂನು ಪಾಸ್ ಆದ ಮೇಲೆ ಮಾತ್ರ ಇದು ಜಾರಿಗೆ ಬರತಕ್ಕದ್ದು, ಹಿಂದಿನಿಂದ ಬರತಕ್ಕದ್ದಲ್ಲ. ಎರಡೂ ಸದನಗಳಲ್ಲಿ ಈ ಗೊತ್ತುವಳಿ ಪಾಸ್ ಆಗಿದೆ. ಆ ರೀತಿ ಆದ ಮೇಲೆಯೇ ಈಗ ಕೇಂದ್ರದಲ್ಲಿ ಪಾಸ್ ಮಾಡಿರುವಂಥದನ್ನು ನಾವು ಒಪ್ಪಿಕೊಂಡಿರತಕ್ಕದ್ದು ಇದೆ. 1976 ರಲ್ಲಿ ಈ ತೀರ್ಮಾನ ಬಂದಿದ್ದರೂ ಹಲವಾರು ರಾಜ್ಯಗಳಲ್ಲಿ ಉದಾಹರಣೆಗೆ ತಮಿಳುನಾಡು, ಆಂಧ್ರಗಳಲ್ಲಿ ಇದನ್ನು ಅಡ್ಯಾಪ್ಟ್ ಮಾಡಿಕೊಳ್ಳಲಿಲ್ಲ. 1976 ರಲ್ಲಿ ನಾವು ಕೇಂದ್ರ ಸರ್ಕಾರದ ಕಾನೂನನ್ನು ಒಪ್ಪಿಕೊಂಡಿದ್ದೇವೆ. ಆ ರೀತಿ ಒಪ್ಪಿಕೊಂಡಮೇಲೆ 1976 ರಿಂದ ಇಲ್ಲಿಯವರೆಗೆ ಸುಮಾರು ಐದು ನಗರ ಪ್ರದೇಶಗಳಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೆ ತರಲು ಆಗಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಎಷ್ಟು ಫ್ಲಾಟ್ ಇದೆ, ಎಷ್ಟು ಎಕರೆ ಸ್ವಾಧೀನ ಮಾಡಿದ್ದೀರಿ ಹೇಳಿ How many lakhs or crores worth property you have acquired, what you are going to do with that?

ಶ್ರೀ ಎಂ.ಎಸ್. ಪಾಟೀಲ್ :— ತಾವೂ ಅಧಿಕಾರದಲ್ಲಿ ಇದ್ದವರು. ಇದನ್ನು ತಾವೂ ನೋಡಿದ್ದೀರಿ. ಇದರಿಂದ ಲಾಭ ಇದೆಯೋ ಇಲ್ಲವೋ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಕಾನೂನು ಎಲ್ಲಾ ಕಡೆ ಇರುತ್ತದೆ. ಆಕ್ಟ್‌ನಲ್ಲಿ Abolition of untouchability ಇದ್ದರೆ ಹಳ್ಳಿಗಳಲ್ಲಿ ಅದು ಇನ್ನೂ ಕೂಡ ಇದೆ. ಅದು ಇದೆಯೆಂದು ತಾವು ಕಾನೂನು ತೆಗೆಯಲು ಆಗುತ್ತದೆಯೆ? ತಮ್ಮ ಕಮಿಟ್‌ಮೆಂಟ್ ಹೇಳಿ. ಇಪ್ಪತ್ತು ವರ್ಷಗಳಲ್ಲಿ ಏನೇನೂ ಆಗಿಲ್ಲವೆಂದು ತಾವು ತೆಗೆದುಹಾಕುತ್ತೀರಾ 29 ವರ್ಷದಿಂದ ಲ್ಯಾಂಡ್ ರಿಫಾರ್ಮ್ಸ್‌ನಿಂದ ಲಾಭವಿಲ್ಲವೆಂದು ತೆಗೆದುಹಾಕುತ್ತೀರಾ? What is your commitment to this Act?

ಶ್ರೀ ಎಂ.ಎಸ್. ಪಾಟೀಲ್ :— ಈ ಆಕ್ಟ್ ಇರುವುದರಿಂದ ಈ ಧಾರಣೆಗಳು ನಗರ ಪ್ರದೇಶದಲ್ಲಿ ಹೆಚ್ಚಾಗುತ್ತಾ ಹೋಗುತ್ತಿದೆ. ಈ ರಿಸ್ಟ್ರಿಕ್ಷನ್ ಇರುವುದರಿಂದ ಫ್ಲಾಟ್‌ಗಳ ಬೆಲೆ ಹೆಚ್ಚಾಗುತ್ತಾ ಹೋಗುತ್ತಿದೆ. ಬಡವರಿಗೆ ಫ್ಲಾಟ್ ಸಿಗಲಾರದ ಸ್ಥಿತಿಯಾಗಿದೆ, ಈ ಆಕ್ಟ್‌ನ್ನು ತೆಗೆಯುವುದರಿಂದ ಫ್ಲಾಟ್‌ಗಳಲ್ಲಿನ ಬೆಲೆ ಕಡಿಮೆಯಾಗುತ್ತದೆ, ಬಡವರಿಗೆ ಅನುಕೂಲವಾಗುತ್ತದೆಂದು ಈ ಬಗ್ಗೆ ನಾನು ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :— ಪಾರ್ಲಿಮೆಂಟ್‌ನಿಂದ ಪಾಸ್ ಆಗಿ ಬಂದಿರುವ ಈ ಆಕ್ಟ್ ಕ್ಲಿಯರ್ ಆಗಿದೆ. ಅದರಲ್ಲಿ ಏನಿದೆ ಎಂದರೆ ``It shall apply to such other States which adopt this Act by a resolution passed in that behalf under clause (2) of Article 252 of the Consititution of India" The option is before you. 1976 ರಿಂದ ಇಲ್ಲಿಯವರೆಗೆ ಹೆಚ್ಚುವರಿ ಜಮೀನು ಸ್ವಾಧೀನಪಡಿಸಿಕೊಂಡಿಲ್ಲವೆಂದು ಇಲ್ಲ, ಈ ವಿನಾಯಿತಿ ಕೊಡುವ ಅಧಿಕಾರ ಸಹ ತಮಗೆ ಇತ್ತು. ಎಷ್ಟು ಪ್ರಕರಣಗಳಲ್ಲಿ ವಿನಾಯಿತಿ ಕೊಟ್ಟಿದ್ದೀರಿ, ಈ ಕಾನೂನು ಇರುವುದರಿಂದ ಒಂದು ರೀತಿ ಭಯ ಇರುತ್ತಿತ್ತು. ಯಾವುದೇ ಒಂದು ಹೌಸಿಂಗ್ ಸೊಸೈಟಿಯವರು ಲೇಔಟ್ ಮಾಡಬೇಕಾದರೆ ಅರ್ಬನ್ ಸೀಲಿಂಗ್ ಆಕ್ಟ್ ಬರುತ್ತದೆ ಎಂಬ ಭಯ ಇರುತ್ತಿತ್ತು. ಆದರೆ ಈಗ ಆ ಭಯ ಇಲ್ಲದಂತೆ ಆಗುತ್ತದಲ್ಲ. ಅವರುಗಳಿಗೆ ನೂರು ಪರ್‌ಸೆಂಟ್ ಅನುಮತಿ ಕೊಟ್ಟುಬಿಟ್ಟರೆ ನೀವು ಯಾರದೋ ಜೊತೆಗೆ ಶಾಮೀಲಾಗಿದ್ದೀರಿ ಎಂಬ ಭಾವನೆ ಬರುತ್ತದೆ. ದಯಮಾಡಿ ತಾವು ಆಕ್ಟ್‌ನ್ನು ರಿಪೀಲ್ ಮಾಡಬೇಕು. ಇದು ಬೇಡ ಎನ್ನುವುದಾದರೆ, ನೀವು 24 ವರ್ಷದಲ್ಲಿ ಇದರಲ್ಲಾಗಿರುವ ಸಾಧಕ ಭಾದಕಗಳ

ಬಗ್ಗೆ ಚರ್ಚೆ ಮಾಡಿ ಈ ಕಾರಣಕ್ಕಾಗಿ ಬೇಡ, ಇದರಿಂದ ಬೆಂಗಳೂರು ಬೆಳೆಯಲು ಅಡ್ಡಿ ಆಗುತ್ತದೆ ಎನ್ನುವುದಾದರೆ ನಾವು ಒಪ್ಪಿಕೊಳ್ಳೋಣ. ತಮಿಳುನಾಡಿನಲ್ಲಿ ಅದನ್ನು ಅಡ್ಜಾಸ್ಟ್ ಮಾಡಿಲ್ಲವೆಂದು ಹೇಳಿದಿರಿ. ಅಂದರೆ ಅಲ್ಲಿನ ಬೆಳವಣಿಗೆ ಏನು, ಇಲ್ಲಿನ ಬೆಳವಣಿಗೆ ಏನು ಎಂಬ ಬಗ್ಗೆ ದಯಮಾಡಿ ಹೇಳಬೇಕಾಗುತ್ತದೆ. ಇವತ್ತು ಕಷ್ಟ, ಹಣ ಇರುವುದು ಎಷ್ಟೋ ಜನರು ಹಳ್ಳಿಗಳಲ್ಲಿ ಹೋಗಿ ಜಮೀನು ತೆಗೆದುಕೊಳ್ಳುತ್ತಿದ್ದರು. ಈಗ ಯಾವುದೇ ಸೀಲಿಂಗ್ ಇಲ್ಲದಿರುವುದರಿಂದ ಅವರುಗಳು ಇಪ್ಪತ್ತು, ನೂರು ಸೈಟುಗಳನ್ನು ಇಲ್ಲೇ ತೆಗೆದುಕೊಳ್ಳುತ್ತಾರೆ, ಬೆಂಗಳೂರನ್ನು ಬಿಟ್ಟು ಅವರು ಹೊರಗಡೆ ಹೋಗುವುದೇ ಇಲ್ಲ. ಹಳ್ಳಿಗಳಿಗೆ ಹೋಗುವುದಿಲ್ಲ. ಬೆಂಗಳೂರನ್ನು ಬಿಟ್ಟು ಹೊರ ವಲಯದಲ್ಲಿ ಜಮೀನನ್ನು ಕೊಳ್ಳತಕ್ಕ ಪ್ರಯತ್ನ ಮಾಡುವುದಿಲ್ಲ. It becomes costly. ಅಡ್ವರ್ಸ್ ಎಫೆಕ್ಟ್ ಆಗುತ್ತದೆ ಎಂಬ ಕಾರಣಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಆಯ್ಕೆ ಇವತ್ತು ತಮ್ಮ ಮುಂದೆ ಇದೆ. ಇದನ್ನು ಸಧ್ಯಕ್ಕೆ ರೀಟೇನ್ ಮಾಡಿಕೊಂಡು ಇದಕ್ಕೆ ಪರ್ಯಾಯವಾಗಿ ಬೇರೆ ಕಾನೂನನ್ನು ತರುವುದರ ಬಗ್ಗೆ ಏನಾದರೂ ಚಿಂತನೆ ಮಾಡುವುದಾದರೆ ಅದರ ಬಗ್ಗೆ ಹೇಳಿ. ಇದರಿಂದ ಬೆಂಗಳೂರು ಬೆಳೆಯುವುದಕ್ಕೆ ತೊಂದರೆ ಆಗುತ್ತದೆ ಎಂದು ಹೇಳುವುದಾದರೆ ಅದನ್ನಾದರು ಹೇಳಿ. ತಾವು ತಮ್ಮ ನಿಲುವನ್ನು ಸ್ಪಷ್ಟಪಡಿಸದಿದ್ದರೆ ನಾವು ಇದನ್ನು ಪಾಸ್ ಮಾಡಿಕೊಡಿ ಎಂದರೆ ಅದು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಛೇರ್ಮನ್‌ರವರೆ, ಕೆಲವು ಮೂಲಭೂತವಾಗಿರತಕ್ಕ ಪ್ರಶ್ನೆಗಳನ್ನು ತಾವು ಎತ್ತಿದ್ದೀರಿ. ಇದು Entry 18 ನಲ್ಲಿ concurrent list ನಲ್ಲಿ ಇರತಕ್ಕ ಒಂದು ಅಧಿಕಾರ. ಈ ವಿಧೇಯಕವನ್ನು ನಮ್ಮ ಪಾರ್ಲಿಮೆಂಟ್ ಪಾಸ್ ಮಾಡುವ ಮೊದಲು ವಿಧಾನ ಮಂಡಲಗಳು ಈ ರೀತಿಯಾದ ವಿಧೇಯಕವನ್ನು ತರಬೇಕು ಎಂದು ಹೇಳಿ ನಾವು ಸಹ ಅಂದಿನ ಕಾಲದಲ್ಲಿ ಎರಡೂ ಸದನಗಳಲ್ಲಿ ಇಂಥ ಒಂದು ವಿಧೇಯಕವನ್ನು ತರಬೇಕು ಎಂದು ಒಂದು ಠರಾವನ್ನು ಮಾಡಿ ನಮಗೆ ಇರತಕ್ಕ ಅಧಿಕಾರವನ್ನು ನಾವು ಆ ಸಂದರ್ಭದಲ್ಲಿ ಕೊಟ್ಟಿದ್ದೇವೆ. ಅನಂತರ 1976 ರಲ್ಲಿ ಈ ವಿಧೇಯಕವನ್ನು ಪಾರ್ಲಿಮೆಂಟ್‌ನಲ್ಲಿ ಅವರು ಜಾರಿಗೆ ತಂದರು. ಆ ವಿಧೇಯಕವನ್ನು ನಾವು ಸಹ ಒಪ್ಪಿಕೊಂಡಿದ್ದೇವೆ. ರೆಜಲ್ಯೂಷನ್ ಪಾಸ್ ಮಾಡುವ ಮೂಲಕ ಯಾವುದೇ ಒಂದು ವಿಧೇಯಕವನ್ನು ಈ ರೀತಿ ಸಂಸತ್ತು ಅಂಗೀಕಾರ ಮಾಡಿದಾಗ ಯಾವ ರಾಜ್ಯದಲ್ಲಿ ಆ ವಿಧೇಯಕ ಜಾರಿಗೆ ತರಬೇಕು ಅಲ್ಲಿ ನಿರ್ಣಯವನ್ನು ತರುವ ಮೂಲಕ ಅದನ್ನು ಒಪ್ಪಿಕೊಳ್ಳುತ್ತೇವೆ ಎಂದು ಮಾಡಿದಮೇಲೆ ಆ ದಿನಾಂಕದಿಂದ ಅದು ಜಾರಿಗೆ ಬರುತ್ತದೆ. ಇದರಿಂದ ಅರ್ಬನ್ ಸೀಲಿಂಗ್ ಆಯಕ್ಟ್‌ಗೆ ಸಂಸತ್ತು ಅಧಿಕಾರ ಕೊಟ್ಟಿರುವ ವಿಧೇಯಕವಾದರೂ ನಾವು ಅದನ್ನು ಜಾರಿಗೆ ತಂದು ನಮ್ಮಲ್ಲಿ ಜಾರಿಗೆ ತರುತ್ತಿದ್ದೇವೆ. ಸಂಸತ್ತು ಈಗ ಇಂಥ ವಿಧೇಯಕ ಬೇಕಾಗಿಲ್ಲ, ಇದರಿಂದ ಬಹಳ ತೊಂದರೆಗೆ ಒಳಗಾದಂಥ ವಿಧೇಯಕ, ಇದರಲ್ಲಿ ಭೂ

ಮಾಲೀಕರಿಗೆ ತೊಂದರೆಯಾಗುತ್ತದೆ, ಹಲವಾರು ಸಂದರ್ಭಗಳಲ್ಲಿ ಈ ರೀತಿ ತಂದಿರುವ ವಿಧೇಯಕದಿಂದ ವ್ಯಾಜ್ಯಕ್ಕೆ ಒಳಪಟ್ಟು ಹತ್ತಾರು ಬಾರಿ ಎಲ್ಲರಿಗೂ ತೊಂದರೆಯಾಗಿದೆ. ನಗರ ಪ್ರದೇಶದ ಒಳಗಡೆ ಈ ವಿಧೇಯದಿಂದ ಏನಾಗಿದೆ ಎಂದರೆ, ಮಾನ್ಯ ಜಯಚಂದ್ರರವರು ಮಾತನಾಡುತ್ತ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಯ ಬಗ್ಗೆ ಹೇಳಿದರು. ಹೌಸ್ ಬಿಲ್ಡಿಂಗ್ ಸೊಸೈಟಿಯವರು ಬಹುಶಃ ಕಾರ್ಪೊರೇಷನ್ ವ್ಯಾಪ್ತಿಯಿಂದ ಹೊರಗಡೆ ಇದ್ದವರು ಆಗಿದ್ದಾರೆ. ಈ ವಿಧೇಯಕವು ಕಾರ್ಪೊರೇಷನ್ ಆಕ್ಟ್‌ನ ಒಳಗಡೆ ಇರುವುದಕ್ಕೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಜಾರಿಗೆ ಬಂದೂದ ಮೇಲೆ ಡಿಕ್ಲರೇಷನ್ ಕೊಡಬೇಕಾಗಿರತಕ್ಕವರು ಆ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಕಾನೂನಿನಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್‌ಗೆ ಹೆಚ್ಚು ಇರತಕ್ಕ ಪ್ರತಿಯೊಬ್ಬರೂ ಸರ್ಕಾರಕ್ಕೆ ಡಿಕ್ಲರೇಷನ್‌ನ್ನು ಕಡ್ಡಾಯವಾಗಿ ಕೊಟ್ಟು, ಕೆಲವು ಸಂದರ್ಭದಲ್ಲಿ ಸರ್ಕಾರ ಹೆಚ್ಚು ಇರತಕ್ಕ ಜಮೀನನ್ನು ತೆಗೆದುಕೊಂಡಿದೆ, ಮಿತಿ ಇರತಕ್ಕ ಜಮೀನನ್ನು ಅವರಿಗೆ ಕೊಟ್ಟಿದ್ದಾರೆ. ಜಮೀನು ಹೆಚ್ಚು ಇದೆಯೆ ಕಡಿಮೆ ಇದೆಯೇ ಎಂದು ವಿಚಾರಮಾಡತಕ್ಕ ಸಂದರ್ಭದಲ್ಲಿ ಜಂಟಿ ಕುಟುಂಬ ಇದ್ದವರು, ಬೇರೆ ಬೇರೆ ಕುಟುಂಬದವರಾಗಿದ್ದಾರೆ, ಬೇರೆ ಬೇರೆ ಕುಟುಂಬ ಆಗಿದ್ದವರು ಇನ್ನೂ ಚಿಕ್ಕ ಚಿಕ್ಕ ಕುಟುಂಬದವರಾಗಿದ್ದಾರೆ. ಮತ್ತು ನಾವು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನ ಅಡಿಯಲ್ಲಿ ಬರುವುದಿಲ್ಲವೆಂದು ಹೇಳಿ ಈ ಆಕ್ಟ್‌ನ ಮಿತಿಯಿಂದ ಹೊರಗಡೆ ಬಂದಿರುವವರ ಸಂಖ್ಯೆಯೇ (70-80 ಪರ್‌ಸೆಂಟ್ ಇದ್ದಾರೆ. ಇದನ್ನು ನಾವು ತಾತ್ವಿಕವಾಗಿ ಒಪ್ಪಿಕೊಳ್ಳೋಣ. ಈ ರೀತಿ ಆದಮೇಲೆ ಈ ವಿಧೇಯಕದಿಂದ ಪ್ರಯೋಜನವಾದರೂ ಏನು? ಇದರಿಂದ ನಾವು ಜಾರಿಗೆ ತಂದಿರುವುದರಿಂದ ಏನೂ ಆಗಿಲ್ಲ. ಯಾರು ಪರಿಮಿತಿಗಿಂತ ಜಾಸ್ತಿ ಇದ್ದಾರೆ ಅವರು ಡಿಕ್ಲರೇಷನ್ ಕೊಟ್ಟೆ ಆಗಿದೆ. ಆ ರೀತಿ ಡಿಕ್ಲರೇಷನ್ ಕೊಟ್ಟು ಕನ್‌ಕ್ಲೂಡ್ ಆಗಿರತಕ್ಕ ಕೇಸುಗಳು ಯಾವುದು ಇತ್ತು ಅದರಲ್ಲಿ ಕೆಲವು ಭಾಗ ಸರ್ಕಾರಕ್ಕೆ ಬಂದಿದೆ, ಇನ್ನು ಕೆಲವು ಭಾಗವನ್ನು ಅವರು ಇಟ್ಟುಕೊಂಡಿದ್ದಾರೆ. ಇನ್ನೂ ಹತ್ತಾರು ಪ್ರಕರಣಗಳು ಇವತ್ತಿನವರೆಗೆ ವ್ಯಾಜ್ಯದ ರೂಪದಲ್ಲಿ ಇದೆ. ಹೈಕೋರ್ಟ್, ಸಿವಿಲ್ ಕೋರ್ಟಿನಲ್ಲೇ ಇದೆ. ಎಲ್ಲೆಲ್ಲಿ ಈ ವಿಧೇಯಕದ ಅನ್ವಯ ಹೆಚ್ಚಿಗೆ ಇದ್ದ ಭೂಮಿಯನ್ನು ಪಡೆದುಕೊಂಡಿದ್ದೀರಿ ಆ ಭೂಮಿಯನ್ನು ಏನು ಮಾಡುತ್ತೀರಿ ಎಂದು ಮಾನ್ಯ ಶ್ರಮೀಳಾ ನೇಸರ್ಗಿಯವರು ಕೇಳಿದರು. ಮತ್ತು ವಿಧೇಯಕಕ್ಕೆ ಒಳಪಟ್ಟ ಹಲವಾರು ವ್ಯಾಜ್ಯಗಳೇನಿದೆ ಅದನ್ನು ತಾವು ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ಈ ವಿಧೇಯಕವನ್ನು ರದ್ದು ಮಾಡುವುದರಿಂದ ಭೂಮಿ ಹೆಚ್ಚು ಇರುವವರಿಗೆ ರಕ್ಷಣೆಯನ್ನು ನಾವು ಕೊಡುತ್ತಿದ್ದೇವೆಂದರೆ ಅದು ಸರಿಯಲ್ಲ. ಭೂಮಿ ಹೆಚ್ಚು ಇರತಕ್ಕವರು ಈಗಾಗಲೇ ಅರ್ಜಿಯನ್ನು ಕೊಟ್ಟು ಅದು ವ್ಯಾಜ್ಯದ ರೂಪದಲ್ಲಿದೆ, ಇನ್ನು ಕೆಲವು ಸಂದರ್ಭದಲ್ಲಿ ಅದು ಸಂಪೂರ್ಣವಾಗಿ ವಿಲೇವಾರಿ ಆಗಿ ಹೆಚ್ಚಿಗೆ ಇರತಕ್ಕದ್ದು ಕೆಲವು ಕಡೆ ಸರ್ಕಾರಕ್ಕೆ ಬಂದಿದೆ. ಇನ್ನು ಕೆಲವರು ನಮಗೆ ಹೆಚ್ಚಿಗೆ ಇಲ್ಲ ಎಂದು ಡಿಕ್ಲೇರೇಷನ್ ಬರೆದು ಕೊಟ್ಟಿದ್ದಾರೆ. ಈ ಒಂದು ವಿಧೇಯಕವನ್ನೇನು ಪಾರ್ಲಿಮೆಂಟ್‌ನಲ್ಲಿ ಅಂಗೀಕಾರ ಮಾಡಿದ್ದಾರೆ

ಅದನ್ನು ನಾವು ಅಡ್ಯಾಪ್ಟ್ ಮಾಡಿಕೊಳ್ಳುತ್ತಿದ್ದೇವೆ. ಈ ಸಂದರ್ಭದಲ್ಲಿ ವ್ಯಾಜ್ಯ ಇರತಕ್ಕದ್ದು, ಹೆಚ್ಚಿಗೆ ಭೂಮಿ ಇರತಕ್ಕದನ್ನು ಈಗಾಗಲೇ ತೀರ್ಮಾನ ಮಾಡಿ ಆ ಭೂಮಿಯ ವ್ಯಾಪ್ತಿಯಲ್ಲಿ ಸರ್ಕಾರಕ್ಕೆ ಬಂದಿರತಕ್ಕದನ್ನು ಏನು ಮಾಡುತ್ತೀರಾ ಎಂದು ಅವರು ಕೇಳಿದ್ದಾರೆ. ಈಗ ಏನು ಆಗಿದೆ ಎಂದರೆ, ಈ ವಿಧೇಯಕವನ್ನು ನೇರವಾಗಿ ರಿಪೀಲ್ ಮಾಡಿಬಿಟ್ಟಿದ್ದಾರೆ. ಬಾಕಿ ಏನನ್ನೂ ಅವರು ಮಾಡುವುದಿಲ್ಲ. ಯಾವಾಗ ರಿಪೀಲ್ ಮಾಡಿಬಿಟ್ಟಿದ್ದಾರೆ, ನಮಗೆ ಇರುವುದು ಜನರಲ್ ಕ್ಲಾಜ್ ಆಕ್ಟ್. ಅದರಲ್ಲಿ ಯಾವುದೇ ಈ ರೀತಿಯಾದ ವಿಧೇಯಕಗಳನ್ನು ನಾವು ರಿಪೀಲ್ ಮಾಡಿ ಆ ರೀತಿ ರಿಪೀಲ್ ಮಾಡಿರತಕ್ಕ ಸಂದರ್ಭದಲ್ಲಿ ಹಿಂದಿನ ಕಾನೂನಿನಲ್ಲಿ ತೆಗೆದುಕೊಂಡಿರತಕ್ಕ ಕೋರ್ಟಿನ ವ್ಯಾಜ್ಯಗಳಲ್ಲಿ, ಕನ್‌ಕ್ಲೂಡೆಡ್ ಕಾಂಟ್ರಾಕ್ಟ್ಸ್ ಆಗಲಿ, ಈ ದಿಸೆಯಲ್ಲಿ ಏನು ಆಗುತ್ತದೆ ಎಂಬ ಬಗ್ಗೆ ಜನರಲ್ ಕ್ಲಾಜ್ ಆಕ್ಟ್‌ನಲ್ಲಿ ಸಂಪೂರ್ಣವಾಗಿ ತೋರಿಸಿದ್ದಾರೆ. ಆದ್ದರಿಂದ ನಾವು ಇದನ್ನು ಅಡ್ಯಾಪ್ಟ್ ಮಾಡಿಕೊಳ್ಳುವುದರಿಂದ ಭೂಮಿ ಹೆಚ್ಚಾಗಿ ಸರ್ಕಾರಕ್ಕೆ ಬಂದಿರುವುದರಿಂದ ಅದನ್ನು ಕೊಡುವ ಪ್ರಶ್ನೆ ಬರುವುದಿಲ್ಲ, ಯ್ಯಾವಾವ ವ್ಯಾಜ್ಯಗಳು ಯ್ಯಾವ್ಯಾವ ಕೋರ್ಟಿನಲ್ಲಿದೆ ಅವುಗಳೆಲ್ಲವೂ ಹಳೆಯ ಕಾನೂನಿನ ಅಡಿಯಲ್ಲೇ as it has not been repealed ಆ ವ್ಯಾಜ್ಯದ ಅಡಿಯಲ್ಲೇ ಜನರಲ್ ಕ್ಲಾಜ್ ಆಕ್ಟ್‌ನಲ್ಲಿ ಮುಂದುವರೆಯುತ್ತಿರುತ್ತದೆ. ಆದ್ದರಿಂದ ಅದರಲ್ಲಿ ತೊಂದರೆ ಬರುವುದಿಲ್ಲ. ಜನರಲ್ ಕ್ಲಾಜ್ ಆಕ್ಟ್ 6ರಲ್ಲಿ ಏನು ಹೇಳುತ್ತಾರೆಂದರೆ, ಎಲ್ಲಾ ವಿಧೇಯಕಕ್ಕೂ ಸಂಬಂಧಪಟ್ಟಿರುವಂತೆ ಬಹಳ it is an omnibus act. It is very important. It reads:-

4.50 ಪಿ.ಎಂ.

``Where this Act or any Central Act or Regulation made after commencement of this Act, repeals any enactment hitherto made or hereafter to be made, then unless different intention appears, the repeal shall not revive anything, which is not in force.."

Nothing is in force now. It will not revive anything in force or exixting at the time at which the repeal takes effect, or

``b) affect the previous operation of any enactment so repealed or anything duly done or suffer thereunder; or

c) affect any right, privilege, obligation or liability acquired, accrued or incurred or incurred under any enactment so repealed; or

d) affect any penalty, forfeiture or punishment incurred in respect of any offence, committed against any enactment so repealed; or

e) affect any investigation, legal proceeding, or remedy in respect of any such right, privilege, obligation, liability, penalty, forfeiture or punishment as aforesaid."

And any such investigation, legal proceeding or remedy, may be instituted, continued or enforced or such privilege, obligation, liability, penalty, forfeiture or punishment as aforesaid.``

Therefore, all pending proceedings which are there before any Court either before the Civil Court or before the High Court, will continue to be there as if it is under the old Act. ಈ ರೀತಿ ಇರುವುದರಿಂದ ನೀವು ಹೇಳಿದ ಹಾಗೆ ಇದನ್ನು ಇಟ್ಟುಕೊಂಡು ಮಾಡಬೇಕಾಗಿರುವುದು ತಾನೆ ಎನು? ಇದು ಇಲ್ಲದಿದ್ದರೆ ಬಹುಶ; ಯಾರೋ ಕೆಲವರು ಕಪ್ಪು ಹಣ ಇಟ್ಟುಕೊಳ್ಳಲು ಅವಕಾಶವಾಗುತ್ತದೆ. ಎಂದು ಬಹುಶ: ನೀವು ಹೇಳಬಹುದು. ಕಪ್ಪು ಹಣ ಮಾಡಿಕೊಳ್ಳುವವನು ಏನೇ ಆದರೂ ಮಾಡಿಕೊಳ್ಳುತ್ತಾನೆ. ಆ ಕಪ್ಪು ಹಣವನ್ನು ತೆಗೆಯುವುದಕ್ಕೆ ಯಾರಿಂದಲೂ ಆಗುವುದಿಲ್ಲ. The total amount of black money in circulation in the country is double than the legal currency which is in operation. That is the official figure ಆದುದರಿಂದ ನಾನು ಹೇಳುವುದೇನೆಂದರೆ ಈ ಒಂದು ಕಾನೂನನ್ನು ಇಟ್ಟುಕೊಂಡು ಮಾಡಬೇಕಾದದ್ದು ಏನೂ ಇಲ್ಲ. ಏನು ಮಾಡಬೇಕಾಗಿತ್ತೋ ಅದನ್ನು ಕಾನೂನಿನಲ್ಲಿ ಮಾಡಿಯಾಗಿದೆ. ಅದನ್ನು ಮಾಡಿ ಎಲ್ಲೆಲ್ಲಿ ಹೆಚ್ಚುವರಿ ಜಮೀನನ್ನು ಸರ್ಕಾರ ಪಡೆದುಕೊಂಡಿದೆ ಅದನ್ನು ಯಾರಿಗೂ ಬಿಟ್ಟುಕೊಡುವ ಹಾಗಿಲ್ಲ. ಜನರಲ್ ಕ್ಲಾಜಸ್ ಆಕ್ಟ್ ಪ್ರಕಾರ ಕೊಡುವ ಹಾಗಿಲ್ಲ. ಯಾವ ಯಾವ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಕೋರ್ಟಿನಲ್ಲಿ ವ್ಯಾಜ್ಯಗಳು ನಡೆಯುತ್ತಿವೆಯೋ ಆ ವ್ಯಾಜ್ಯಗಳೆಲ್ಲವೂ ಕೂಡ ಜನರಲ್ ಕ್ಲಾಜಸ್ ಆಕ್ಟನಲ್ಲಿಯ ಸೆಕ್ಷನ್ ಪ್ರಕಾರ ಮುಂದುವರಿಯುತ್ತಲೇ ಇದೆ. ಅದನ್ನು ರಿಪೀಲ್ ಮಾಡುವುದಕ್ಕೆ ಅಧಿಕಾರವಿಲ್ಲ. ಅದರೆ ಇದನ್ನು ಅಡಾಪ್ಟ್ ಮಾಡಿದ ತಾರೀಖಿನ ಮುಂದೆ ಎಲ್ಲಾದರೂ ಯಾರಿಗಾದರೂ ಸರ್‌ಪ್ಲಸ್ ಲ್ಯಾಂಡ್ ಇದ್ದರೆ ಅದನ್ನು ನೋಡಬೇಕು. ಏಕೆಂದರೆ ಈಗ ಅದೂ ಗೊತ್ತಿಲ್ಲ. ಅವರು ಡಿಕ್ಲರೇಷನ್ ಕೊಡಬೇಕಾಗಿತ್ತು. ನಾವು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ 31-03-1974 ಕಡೆಯ ದಿನವೆಂದು ಒಂದು ಡೆಡ್‌ಲೈನ್ ಕೊಟ್ಟಿದ್ದೆವು. ಅದೇ ರೀತಿಲ್ಲಿ ಈ ಕಾನೂನು ಜಾರಿಗೆ ಬಂದಾಗ ಸರ್‌ಪ್ಲಸ್ ಲ್ಯಾಂಡ್ ಹೊಂದಿರುವವರೆಲ್ಲರೂ ಕೂಡ ವಿಶೇಷ ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ಕಡ್ಡಾಯವಾಗಿ ಕೊಡಬೇಕು ಎಂದು ಬಹಳವರ್ಷಗಳ ಹಿಂದೆಯೇ ಹೇಳಲಾಗಿದೆ. ಅದಾಗಿ ಈಗಾಗಲೇ 24 ವರ್ಷಗಳಾಗಿದೆ. ಆದುದರಿಂದ ಸರ್‌ಪ್ಲಸ್ ಲ್ಯಾಂಡ್ ಬಗ್ಗೆ ಅರ್ಜಿ ಕೊಡುವವರು ಇಂದು ಯಾರು ಇಲ್ಲ. ಎಲ್ಲರೂ ಅರ್ಜಿಯನ್ನು ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥವರ

ಅರ್ಜಿಗಳೆಲ್ಲವೂ ಕಳೆದ 15-20 ವರ್ಷಗಳಿಂದ ಕೋರ್ಟ್‌ನಲ್ಲಿ ಇದ್ದು ಕೇಸ್ ನಡೆಯುತ್ತಿದೆ. ಅದುದರಿಂದ ಜನರಲ್ ಕ್ಲಾಜಸ್ ಆಕ್ಟ್ 6ರಲ್ಲಿ ಯಾವುದನ್ನು ಸಂಪೂರ್ಣ ಮಾಡಿದೆ ಅದರ ಬಗ್ಗೆ ರಿವ್ಯೆವ್ ಮಾಡುವ ಪ್ರಶ್ನೆಯೇ ಇಲ್ಲ. ಯಾವುದು ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತಿದೆಯೋ ಅವೆಲ್ಲವೂ ಕೂಡ ಹಳೆಯ ಆಕ್ಟ್ ಪ್ರಕಾರದ ಮಾದರಿಯಲ್ಲಿಯೇ ಅದು ಮುಂದುವರಿದುಕೊಂಡು ಹೋಗುತ್ತಿರುತ್ತದೆ. ಹೀಗಿರುವುದರಿಂದ ಈಗ ಇರುವ ಕಾನೂನನ್ನು ಇಟ್ಟುಕೊಂಡು ಏನು ಪ್ರಯೋಜನ? ಇದರ ಬಗ್ಗೆ ಮಾನ್ಯ ಖರ್ಗೆಯವರು ಮತ್ತು ಜಯಚಂದ್ರರವರು ದಯವಿಟ್ಟು ಹೇಳಬೇಕು. ಬಹುಶ: ನಾವು ಇವೊತ್ತು ಈ ಕಾನೂನನ್ನು ಅಡಾಪ್ಟ್ ಮಾಡುವುದರಿಂದ ಏನು ತೊಂದರೆಯಾಗುತ್ತದೆ ಎಂಬ ಬಗ್ಗೆ ದಯವಿಟ್ಟು ಹೇಳಿದರೆ ಖಂಡಿತವಾಗಿ ಇದರ ಬಗ್ಗೆ ವಿಚಾರ ಮಾಡಲು ನಿಮ್ಮ ಜೊತೆ ಚರ್ಚೆಯನ್ನು ಬೇಕಾದರೆ ಮಾಡೋಣ. ಕಾನೂನು ಮಾತ್ರ ಇದೆ, ಇದನ್ನು ದುರುಪಯೋಗ ಮಾಡಿಕೊಳ್ಳುವ ಅಧಿಕಾರಿಗಳು ಸಾಕಷ್ಟು ಇದ್ದಾರೆ. ಈ ರೀತಿ ದುರುಪಯೋಗ ಮಾಡಿಕೊಂಡು ಲಾಭ ಪಡೆದುಕೊಳ್ಳುವವರೂ ಕೂಡ ಬಹಳಷ್ಟು ಜನ ಇದ್ದಾರೆ. ಇಲ್ಲವೆಂದು ನಾವು ಮತ್ತು ನೀವು ಹೇಳುವುದಕ್ಕೆ ಆಗುವುದಿಲ್ಲ. ಒಂದು ವಿಷಯವನ್ನು ನಾವು ಹೇಳಬಹುದು. ಏನೆಂದರೆ ಇಂದು ರಿಯಲ್ ಎಸ್ಟೇಟ್ ಕೊಲ್ಯಾಪ್ಸ್ ಆಗಿದೆ. 1992, 93 ಮತ್ತು 94ರಲ್ಲಿ ಒಂದು ರೀತಿಯ ಬೂಮ್ ಇತ್ತು It has come down by more than about 50 to 60% today. The flats which were fetching Rs.17-18 lakhs, these flats are there for calling for about 6-7 lakhs of rupees. ಹೀಗಿದ್ದರೂ ಕೂಡ ಅಲ್ಲೋ ಇಲ್ಲೋ ಕೆಲವು ಹೆಚ್ಚು ಲ್ಯಾಂಡ್‌ನ್ನು ಹೊಂದಿರುವರರು ಡಿಕ್ಲರೇಷನ್ ಮಾಡದೇ ಇದ್ದರೆ ಅಂಥವರಿಗೆ ಒಂದು ಅವಕಾಶ ಸಿಗುವಾಗ I am very certain further the land value will come down in urban areas. It is to the advantage of those who want to acquire the land or flats here. It is not to the dis-advantage of those who want to acquire small bit of land or small flats here. Let me tell you honestly. ಒಂದು ಕಾಲದಲ್ಲಿ ಇದರ ಬಗ್ಗೆ ಯೋಜನೆ ಮಾಡಿದ್ದು ನಿಜ, ಯೋಜನೆ ಮಾಡಿಯಾದ ಮೇಲೆ ಅರ್ಬನ್ ಲ್ಯಾಂಡ್ ಸೀಲಿಂಗ್‌ನ ಅಡಿಯಲ್ಲಿ ನೀವು ಎಷ್ಟು ಜನರಿಗೆ ಎಕ್ಸ್‌ಂಪಷನ್ ಕೊಟ್ಟಿದ್ದೀರಿ ಎಂದು ಕೇಳಿದಿರಿ, ಏಕೆಂದರೆ ಅಧಿಕಾರ ಇತ್ತಲ್ಲ; ಇದು ಸುಪ್ರೀಂಕೋರ್ಟ್‌ಗೆ ಹೋದಮೇಲೆ ರಿಯಲ್ pecuniary ಸಫರಿಂಗ್ಸ್ ಎಂದು ಹೇಳುತ್ತಾ ಇರತಕ್ಕಂಥದ್ದು ಎಲ್ಲಾದರೂ ಬಂದ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಇತ್ತು. ಬಹುಶ: ಅದೇ ಕ್ಲಾಜನ್ನು ಎಲ್ಲಾ ಸಂದರ್ಭಗಳಲ್ಲೂ, ಎಲ್ಲಾ ಸರ್ಕಾರಗಳೂ ಸಮಯಕ್ಕೆ ಸರಿಯಾಗಿ ಅನುಕೂಲಕ್ಕೆ ಸರಿಯಾಗಿ ಮತ್ತು ರಾಜಕಾರಣಕ್ಕೆ ಸರಿಯಾಗಿ ಅದನ್ನು ಪೂರ್ಣವಾಗಿ ಬಳಕೆ ಮಾಡಿಕೊಂಡೇ ಬರಲಾಗಿದೆ. ಎಕ್ಸ್‌ಂಪಷನ್ ಕ್ಲಾಜಸ್‌ನ್ನು ಬಳಕೇ ಮಾಡದೇ ಇರುವ ಯಾವುದೇ ಸರ್ಕಾರ ಕರ್ನಾಟಕ ರಾಜ್ಯದಲ್ಲಿತ್ತೇ ಎಂಬ ಬಗ್ಗೆ ದಯವಿಟ್ಟು ಯಾರಾದರೂ

ಹೇಳಿ. ಆದುದರಿಂದ ಈ ಹಿಂದೆ ಆಯಾಯಾ ಕಾಲಕ್ಕೆ ಅನುಗುಣವಾಗಿ, ಆಯಾಯಾ ವಿಚಾರಕ್ಕೆ ಅನುಗುಣವಾಗಿ, ಆಯಾಯಾ ರಾಜಕೀಯ ಸಿದ್ಧಾಂತಕ್ಕೆ ಅನುಗುಣವಾಗಿ ಕಾನೂನಿನಲ್ಲಿರತಕ್ಕಂಥ ಆ ಒಂದು ಅವಕಾಶವನ್ನು ಎಲ್ಲರೂ, ಎಲ್ಲಾ ರಾಜಕೀಯ ಪಕ್ಷಗಳೂ, ಎಲ್ಲಾ ಸರ್ಕಾರಗಳೂ ಬಳಕೆ ಮಾಡಿಕೊಂಡು ಬಂದಿರುವುದು ನಮಗೆ ಗೊತ್ತಿದೆ. ಆದುದರಿಂದ ಇವೊತ್ತು ಈ ಕಾನೂನಿಗೆ ಸಂಬಂಧಪಟ್ಟಂತೆ ನಾವೆಲ್ಲರೂ ಒಂದು ನಿರ್ಣಯವನ್ನು ಒಪ್ಪುವುದರಿಂದ ಬಹಳ ಹಾನಿಯಾಗುತ್ತದೆ ಎಂದು ನೀವು ಏನಾದರೂ ವಿಷಯಗಳನ್ನು ಹೇಳುವುದಿದ್ದರೆ ಹೇಳಿ. ಅದರ ಬಗ್ಗೆ ನಾವು ಮತ್ತು ನೀವು ಚರ್ಚೆ ಮಾಡೋಣ. We have looked into the matter in detail. ಇನ್ನೂ ಒಂದು ನಮ್ಮದೇ ಆಗಿರತಕ್ಕಂಥ ಕಾಯಿದೆ ಕರ್ನಾಟಕ ರಾಜ್ಯದಲ್ಲಿ ಇತ್ತು. ಕರ್ನಾಟಕ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಎನ್ನುವ ಕಾಯಿದೆ ನಮ್ಮಲ್ಲಿ ಇತ್ತು. ಆದರೆ ಇದು ಬಂದಾದ ಮೇಲೆ ನಾವು ಹಿಂದಿನದನ್ನು ಜಾರಿಗೆ ಕೊಡಲಿಲ್ಲ. It has not come into force at all. ಆದರೆ ಇವೊತ್ತು ಅದನ್ನು ಜಾರಿಗೆ ತರಬೇಕಾದ ಅವಶ್ಯಕತೆ ಏನೂ ಇಲ್ಲ. ಅದನ್ನು ಜಾರಿಗೆ ತರಬೇಕಾದ ಅವಶ್ಯಕತೆ ಎಲ್ಲಾದರೂ ಕಂಡುಬಂದರೆ certainly, Government will look into that and revive the old Act. ದಯವಿಟ್ಟು ನೀವು ಅದರ ಬಗ್ಗೆ ಚಿಂತನೆ ಮಾಡಿ. ನಾವೂ ಅದರ ಬಗ್ಗೆ ಚಿಂತನೆ ಮಾಡೋಣ. ಆದುದರಿಂದ ಈಗ ತಂದಿರತಕ್ಕಂಥ ನಿರ್ಣಯದಲ್ಲಿ ಏನಾದರೂ ತೊಂದರೆಯಾಗುವುದಿದ್ದರೆ ಮಾನ್ಯ ಮೊಯ್ನಿಯವರೆ ನೀವು ದಯವಿಟ್ಟು ಹೇಳಿ. If there is anything; we are open for every thing.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) :— 1976 ರಿಂದ ಇಲ್ಲಿಯವರೆವಿಗೆ ಎಲ್ಲಾ ಸರ್ಕಾರಗಳೂ ಎಕ್ಸ್‌ಂಪೆಷನ್ ಕೊಟ್ಟಾದ ಮೇಲೂ ಕೂಡ ಉಳಿದಿರುವ ಜಮೀನು ಎಷ್ಟು? ಅದನ್ನು ನೀವು ಏನು ಮಾಡುತ್ತೀರಿ? ಆ ರೀತಿ ನೀವು ಅಕ್ವೈರ್ ಮಾಡಿಕೊಂಡ ಲ್ಯಾಂಡ್ ಕೇಸ್‌ಗಳನ್ನು ಹೇಗೆ ಡಿಸ್‌ಪೋಸಲ್ ಮಾಡುತ್ತೀರಿ ಎಂಬ ಬಗ್ಗೆ ಹೇಳಿ. ಒಂದು ವೇಳೆ ಅವರುಗಳು ನಾಳೆ ಕೋರ್ಟ್‌ಗೆ ಹೋಗಿ ಆಕ್ಟೇ ರಿಪೀಲ್ ಆಗಿರುವುದರಿಂದ ನಮ್ಮ ಭೂಮಿಯನ್ನು ನಮಗೇ ಕೊಡಿ ಎಂದು ಕೇಳಿದರೆ ಆಗ ಏನು ಮಾಡುತ್ತೀರಿ?

ಶ್ರೀ ಎಂ.ಸಿ. ನಾಣಯ್ಯ :— ಜನರಲ್ ಕ್ಲಾಜಸ್ ಆಕ್ಟ್‌ನಲ್ಲಿ ಸರ್ಕಾರಕ್ಕೆ ಬಂದಿರತಕ್ಕಂಥ ಜಮೀನನ್ನು ಹಿಂದಕ್ಕೆ ಕೊಡುವುದಕ್ಕೆ ಬರುವುದಿಲ್ಲ; ಅದಕ್ಕೆ ಅವಕಾಶವಿಲ್ಲ. ಕೋರ್ಟ್‌ನಲ್ಲಿರುವ ವ್ಯಾಜ್ಯಗಳನ್ನು ಹಳೇ ಕಾನೂನಿನ ಪ್ರಕಾರ ಮುಂದುವರಿಸಿಕೊಂಡು ಹೋಗಲೇಬೇಕಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಮಾನ್ಯ ಕಾನೂನು ಮಂತ್ರಿಗಳೆ, we are arguing in a vacum. ನೀವು ರಿಪೀಲಿಂಗ್ ಆಕ್ಟ್ ಏನು ಇದೆ ಎಂಬುದನ್ನೇ ನಮ್ಮ

ಮುಂದೆ ಇಟ್ಟಿಲ್ಲ. What is it that is repealed. ಎಂಟೈರ್ ಆಕ್ಟ್ ರಿಪೀಲ್ ಆಗಿದೆಯೇ? Is there a saving clause? ಸೇವಿಂಗ್ ಕ್ಲಾಸ್ ಇದೆಯೋ ಅಥವಾ ಇಲ್ಲವೋ ಎಂಬುದನ್ನು ನಾವು ತಿಳಿಯಬೇಕಲ್ಲವೆ? If it is saved, whether the pending litigations have been saved.ಅದೆಲ್ಲವೂ ಸೇವ್ ಆಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನಮಗೆ ಆ ವಿಚಾರವನ್ನು ಹೇಳೇ ಇಲ್ಲ. ಒಂದು ವೇಳೆ ಎಂಟೈರ್ ಆಕ್ಟ್ ರಿಪೀಲ್ ಆಗಿದ್ದರೆ what is the effect of repeal? ನೀವು ಲಾಸ್ಟ್ ಟೈಮ್ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ರಿಪೀಲ್ ಆದಾಗಲೂ ಕೂಡ ಸೇವ್ ಆಗದೇ ಇದ್ದಂಥ ಸಂದರ್ಭದಲ್ಲಿ ಕೋರ್ಟ್‌ನಲ್ಲಿ ಈ ವಿಷಯಗಳು ಬಂದಿವೆ. What is the effect of repeal. ಎಂದು ಬಂದಿದೆ. ಆದುದರಿಂದ ಇದರಲ್ಲಿ ನೀವು ಬ್ಲಾಂಕೆಟ್ ರೀತಿಯಲ್ಲಿ ಎಲ್ಲವೂ ರಿಪೀಲ್ ಆಗಿದೆ ಎಂದರೆ Your Sec. 6 of the General clauses Act will not come to your help at all. That is why what is the effect of the repeal? What is the wording that has been used in the Act. kindly tell us.

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಸಚಿವರು) :— ಅಧ್ಯಕ್ಷರೇ There are two issues now. ರಿಪೀಲಿಂಗ್ ಸೆಕ್ಷನ್‌ನಲ್ಲಿ ರಿಪೀಲಿಂಗ್ ಆಕ್ಟ್‌ನಲ್ಲಿ If the intention of the Parliament is to save that all the lands which are taken over by the Government will have to be given back.. ಎಂದು ಹೇಳುತ್ತಾ ಇರತಕ್ಕಂಥಾದ್ದಕ್ಕೆ ಈ ಸೇವಿಂಗ್ ಕ್ಲಾಸ್‌ನ್ನು ಇಂಟ್ರಡ್ಯೂಸ್ ಮಾಡಿದರೆ, intention is definitely different. When the Act is just repealing the whole thing-now this Act is repealing the whole thing, they have not saved anything. Now general Clauses Act Section comes into being. Where the intention is otherwise.. this is just a small repealing Act of the existing Act. Got the Gazette! This Act may be called the Urban Land Ceiling (Repeal) Act, 1999. It applies in the first instance for the whole of the States of Haryana and Punjab and all the Union Territories and it shall apply to such other States, which adopts this Act by resolution passed in that behalf under clause 2 of Article 252. ಆದಕಾರಣ ನಾವು ಈಗ ಅದನ್ನು ಅಡಾಪ್ಟ್ ಮಾಡುವುದಕ್ಕೆ ಈ ನಿರ್ಣಯವನ್ನು ತಂದಿರತಕ್ಕಂಥಾದ್ದು ಇದೆ. It shall also be deemed to have come into force.. The Urban Land Ceiling Act, 1976, hereinafter referred to as the Principal Act, is hereby repealed. ಅವರು ಪಾರ್ಲಿಮೆಂಟಿನಲ್ಲಿ ನಿಮ್ಮ ಪೆಂಡಿಂಗ್ ಕೇಸಸ್ ಏನಾಗಬೇಕು

ಎಂದು ಹೇಳುವ ಬಗ್ಗೆ ಏನನ್ನೂ ಹೇಳಲಿಲ್ಲ. When they have not said it, automatically Sec.6 of the General Clauses Act will come into operation. All existing litigations, which are pending in all the Courts will subsist under the provisions of the previous Act as though the Act has not been repealed. ಆದುದರಿಂದ ಸರ್ಕಾರಕ್ಕೆ ಬಂದಿರುವ ಜಮೀನು ಸರ್ಕಾರದಲ್ಲೇ ಉಳಿದುಕೊಳ್ಳುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ನಾಣಯ್ಯನವರೆ, ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಈಗಾಗಲೇ ಡಿಕ್ಲೆರೇಷನ್ ಮಾಡಿ ಅರ್ಜಿಯನ್ನು ವಿಶೇಷ ಜಿಲ್ಲಾಧಿಕಾರಿಯವರಿಗೆ ಕೊಟ್ಟಿರುವುದರಲ್ಲಿ ಅನೇಕ ಅರ್ಜಿಗಳು ಇತ್ಯರ್ಥವಾಗದೇ ಪೆಂಡಿಂಗ್‌ನಲ್ಲಿವೆ. ಡೆಪ್ಯುಟಿ ಕಮಿಶನರವರ ಆದೇಶದ ಮೇಲೆ ವೇರಿಯಸ್ ಕೋರ್ಟ್‌ಗಳಲ್ಲಿ ಕೇಸುಗಳು ಪೆಂಡಿಂಗ್‌ನಲ್ಲಿವೆ. ಸಪೋಸ್ ನೀವು ಆಕ್ಟ್‌ನ್ನು ರಿಪೀಲ್ ಮಾಡಿದಾಗ ಆ ಕೇಸ್‌ಗಳೆಲ್ಲಾ ರಿಮ್ಯಾಂಡ್ ಆಗಿ ಬಂದಾಗ ಅವು ಯಾವುದೂ ಕೂಡ ನಿಮ್ಮ ಕೈಗೆ ಸಿಗುವುದಕ್ಕೇ ಸಾಧ್ಯವಾಗುವುದಿಲ್ಲ. If the order under Appeal is set aside, again it goes to the special D.C only. ಆದುದರಿಂದ ಆಕ್ಟ್ ರಿಪೀಲ್ ಆದಾಗ ನೀವು ಅವುಗಳ ಮೇಲೆ ಯಾವ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇದುವರೆಗೆ ನೀವು ಎಷ್ಟು ಡಿಕ್ಲರೇಷನ್ಸ್‌ಗಳನ್ನು ಫೈಲ್ ಮಾಡಿದ್ದೀರಿ? ಅದರಲ್ಲಿ ಎಷ್ಟು ಡಿಸ್‌ಪೋಸ್ ಆಗಿದೆ ಎಂಬ ಬಗ್ಗೆಯಾದರೂ ನೀವು ನಮಗೆ ಮಾಹಿತಿಯನ್ನು ಕೊಡಿ.

ಶ್ರೀ ಎಂ.ಸಿ. ನಾಣಯ್ಯ :— 1976ರಿಂದ 1999ರವರೆಗೆ ಏನೇನಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಕೇಳಿದರೆ ಅದರ ಬಗ್ಗೆ ಮಾಹಿತಿ ನನ್ನ ಹತ್ತಿರ ಈಗ ಇಲ್ಲ. ಈಗ 1976 ರಿಂದ 1983 ರವರೆಗೆ ನಿಮ್ಮ ಸರ್ಕಾರ ಇತ್ತು. ಆ ಸಂದರ್ಭದಲ್ಲಿ ಒಂದೂವರೆ ವರ್ಷ ನಮ್ಮ ಸರ್ಕಾರ ಇತ್ತು. ಆ ಸಂದರ್ಭದಲ್ಲಿ ನಾನೂ ಇದ್ದೆ. ಅಲ್ಲಿಂದ 1983 ರಿಂದ 88-89 ರವರೆಗೆ ಪುನಃ ನಮ್ಮ ಸರ್ಕಾರ ಇತ್ತು. 1989ರಿಂದ 1994ರವರೆಗೆ ನಿಮ್ಮ ಸರ್ಕಾರದ ಅವಧಿ. 1994-99ರವರೆಗೆ ನಮ್ಮ ಸರ್ಕಾರ ಇದೆ. ಈಗ 1994 ರಿಂದ 99ರವರೆಗೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಲ್ಲಿ ಎಗ್ಸಂಪ್ಷನ್ ಕೊಟ್ಟಿರುವುದು ಬಹಳ ಕಡಿಮೆ. ಅದು ಇರಲಿಕ್ಕಿಲ್ಲ. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಲ್ಲಿ ಕೊಡುವುದಕ್ಕೆ ಬೇರೆ ಲಿಟಿಗೇಷನ್ ಉಂಟು. ಈಗ ನಮ್ಮ ಸರ್ಕಾರ, ಆದುದರಿಂದ ನಿಮ್ಮ ಕಾಲದಲ್ಲಿ ಆಗಿತ್ತು, ನಮ್ಮ ಕಾಲದಲ್ಲಿ ಆಗಿತ್ತು ಎಂದು ಒಟ್ಟಿಗೆ ಫಿಗರ್ಸ್ ಕೊಡಿ ಎಂದು ಕೇಳಿದರೆ I do not know, I am sorry, I don't have the figures before me now. ಆದರೆ factual ಪೊಜಿಷನ್ ಹೇಳಿದ್ದೇನೆ. I don't think that there is any legal hurdle in accepting the resolution as at the moment. This is all.

(ಮತಕ್ಕೆ ಹಾಕುವುದು)

ಛೇರ್ಮನ್ :— ಪ್ರಸ್ತಾಪ ಏನೆಂದರೆ, ಭಾರತ ಸಂವಿಧಾನದ 252 (2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ, 1999ನ್ನು (1999ರ ಕೇಂದ್ರ ಅಧಿನಿಯಮ 15) ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು) :— ಮಾನ್ಯ ಚೇರ್‌ಮನ್‌ರವರೇ, ಭಾರತ ಸಂವಿಧಾನ 252(2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ 1999ನ್ನು (1999ರ ಕೇಂದ್ರ ಅಧಿನಿಯಮ 15) ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ :— ನಿರ್ಣಯವನ್ನು ಮಂಡಿಸಲಾಗಿದೆ.

ಛೇರ್ಮನ್ :— ನಿನ್ನೆ ಮಾನ್ಯ ಅರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಆರೋಗ್ಯ ಮಂತ್ರಿಗಳು ರಿಪ್ಲೈ ಮಾಡುತ್ತೇನೆಂದು ಹೇಳಿದಿರಿ.

ಶ್ರೀ ಅರಗ ಜ್ಞಾನೇಂದ್ರ :— ನಾನು ತೀರ್ಥಹಳ್ಳಿಯಲ್ಲಿನ ಆಸ್ಪತ್ರೆಗೆ ಪ್ರಸೂತಿ ತಜ್ಞರು ಮಹಿಳಾ ವೈದ್ಯರು ಇಲ್ಲವೆಂದು ಹೇಳಿದ್ದೆ.

(6) ಮಂತ್ರಿಗಳ ಹೇಳಿಕೆ

(ಅ) ತೀರ್ಥಹಳ್ಳಿ ಆಸ್ಪತ್ರೆಗೆ ಪ್ರಸೂತಿ ತಜ್ಞರ ಮಹಿಳಾ ವೈದ್ಯರ ನೇಮಕ.

+ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :— ಮಾನ್ಯ ಚೇರ್‌ಮನ್‌ರವರೇ, ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ಸದಸ್ಯರಾದ ಅರಗಜ್ಞಾನೇಂದ್ರ ಅವರು ತೀರ್ಥಹಳ್ಳಿಯ ಜನರಲ್ ಆಸ್ಪತ್ರೆಯಲ್ಲಿ ಇದ್ದಂತಹ ಮಹಿಳಾ ವೈದ್ಯರು ಸರಿಯಾಗಿ ಕೆಲಸ ಮಾಡತ್ತಿಲ್ಲವೆಂದು ಹೇಳಿದ ಕಾರಣ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದರು. ಅವರ ಒತ್ತಾಯದ ಪ್ರಕಾರ ಅಲ್ಲಿ ವೈದ್ಯರು ಇಲ್ಲ, ಖಾಲಿ ಬಿದ್ದಿದೆ ಎಂದು ಪದೇ ಪದೇ ಹೇಳುತ್ತಿದ್ದರು. ಹಾಗೂ ಸಾರ್ವಜನಿಕರ ತೊಂದರೆಯನ್ನು ಸರ್ಕಾರದ ಗಮನಕ್ಕೆ ಕೂಡ ತಂದಿದ್ದರು. ಸಾರ್ವಜನಿಕರ ಹಿತದೃಷ್ಟಿಯಿಂದ ದಿನಾಂಕ 8-12-1998ರಲ್ಲಿ ಡಾ: ವನಜಾಕ್ಷಿ ಎಂಬ ಮಹಿಳಾ ವೈದ್ಯರನ್ನು ಸರ್ಕಾರ ಅಲ್ಲಿ ಆ ಸ್ಥಳಕ್ಕೆ ನಿಯುಕ್ತಿಗೊಳಿಸಿತು. ಅಲ್ಲಿ ಅವರು ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಂಡ ಮೇಲೆ ಮತ್ತೆ ಅವರು ಕ್ಯಾಜ್ಯುವಾಲಿಟಿ ಲೀವ್ ಹಾಕಿದ್ದಾರೆ. ಆದಾದಮೇಲೆ ದಿನಾಂಕ 28-4-1999ರಲ್ಲಿ ಡಾ: ಬಿ.ಆರ್. ಶಶಿಕಲಾ ಎನ್ನುವವರನ್ನು ಅಲ್ಲಿ ಸ್ಥಳ ನಿಯುಕ್ತಿಗೊಳಿಸಿದ್ದು,